ಸಂಪುಟ 01 | ಸಂಚಿಕೆ 193 | ಸೋಮವಾರ 8 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಸಾಗರ ದಿನ (World Oceans Day)

ಸಾಗರಗಳ ಮಹತ್ವ, ಸಮುದ್ರ ಜೀವಿಗಳ ರಕ್ಷಣೆ ಮತ್ತು ಸಮುದ್ರ ಮಾಲಿನ್ಯ ಕಡಿಮೆ ಮಾಡುವ ಬಗ್ಗೆ ಜಾಗೃತಿ ಮೂಡಿಸುವ ದಿನ.
1992ರಲ್ಲಿ ಪ್ರಸ್ತಾಪಿಸಲಾಗಿ, ವಿಶ್ವಸಂಸ್ಥೆಯ ಆಶ್ರಯದಲ್ಲಿ ಆಚರಿಸಲಾಗುತ್ತದೆ.

2) ವಿಶ್ವ ಮೆದುಳಿನ ಗೆಡ್ಡೆ ದಿನ (World Brain Tumour Day)

ಮೆದುಳಿನ ಗೆಡ್ಡೆಗಳ ಬಗ್ಗೆ ಅರಿವು ಮೂಡಿಸಲು ಮತ್ತು ರೋಗಿಗಳ ಬೆಂಬಲಕ್ಕಾಗಿ ಕೆಲವು ದೇಶಗಳಲ್ಲಿ ಆಚರಿಸಲಾಗುತ್ತದೆ.

## ಸುಭಾಷಿತ

ನಿಜವಾದ ವಿದ್ಯೆಯು ಮನುಷ್ಯನಿಗೆ ಆಲೋಚಿಸುವುದನ್ನು ಕಲಿಸುತ್ತದೆ.

– ಹಾ.ಮಾ.ನಾಯಕ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587

# I.N.D.I.A : 2029 ರ ಚುನಾವಣೆಗೆ ಈಗಿನಿಂದಲೇ ರಣತಂತ್ರ!

## ದೆಹಲಿಯಲ್ಲಿ ನಾಳೆ ಇಂಡಿಯಾ ಜನಬಂಧನ್ ಮಹಾಸಭೆ, ಯಾರೆಲ್ಲಾ ಭಾಗಿ?

◆ ನೈಜ್ಯ ದೆಸೆ ನ್ಯೂಸ್

ನವದೆಹಲಿ : 2029ರ ಸಾರ್ವತ್ರಿಕ ಚುನಾವಣೆಯನ್ನು (Election) ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದ(Central Government) ವಿರುದ್ಧ ಹೋರಾಟದ ರೂಪುರೇಷೆಗಳನ್ನು ಸಿದ್ಧಪಡಿಸಲು ವಿರೋಧ ಪಕ್ಷಗಳ ಮೈತ್ರಿಕೂಟ ಸಜ್ಜಾಗಿದೆ. ನವದೆಹಲಿಯ(Delhi) ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಸೋಮವಾರ ಮಧ್ಯಾಹ್ನ 12 ಗಂಟೆಗೆ ಆಯೋಜಿಸಲಾಗಿರುವ ಇಂಡಿಯಾ ಜನಬಂಧನ್(India Janabandan) ಮಹತ್ವದ ಸಭೆಯಲ್ಲಿ ಒಟ್ಟು 23 ರಾಜಕೀಯ ಪಕ್ಷಗಳು ಭಾಗವಹಿಸಲಿವೆ ಎಂದು ಕಾಂಗ್ರೆಸ್(-Congress) ಪ್ರಕಟಿಸಿದೆ. ವಿರೋಧ ಒಗ್ಗಟ್ಟಿನಿಂದ ಇವೆ ಎಂಬುದನ್ನು ಈ ಸಭೆ ಸಾಬೀತುಪಡಿಸಲಿದೆ ಎಂದು ಮೈತ್ರಿಕೂಟ ಪ್ರತಿಪಾದಿಸಿದೆ.ಜನಬಂಧನ್ ಮಹಾಸಭೆಯಲ್ಲಿ 23 ಪಕ್ಷ ಭಾಗಿ ಈ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಜೂನ್ 8 ರಂದು ನಡೆಯಲಿರುವ ಸಭೆಯಲ್ಲಿ ಪಾಲ್ಗೊಳ್ಳಲು 23 ಪಕ್ಷಗಳು ಸಮ್ಮತಿ ಸೂಚಿಸಿವೆ ಎಂದು ತಿಳಿಸಿದ್ದಾರೆ.



ಈ ಪೋಸ್ಟ್ ಅನ್ನು ಟ್ಯಾಗ್ ಮಾಡಿರುವ ತೃಣಮೂಲ ಕಾಂಗ್ರೆಸ್ (nJA[1]) ಸಂಸದ ಡೆರೆಕ್ ಒಬ್ರಿಯಾನ್, ಒಂದು ಸಾಮಾನ್ಯ ಮತ್ತು ಸ್ಪಷ್ಟ ಉದ್ದೇಶದೊಂದಿಗೆ ಈ ಸಭೆ ನಡೆಯುತ್ತಿದ್ದು, ಇಂಡಿಯಾ ಒಕ್ಕೂಟ ಸಂಪೂರ್ಣ ಒಗ್ಗಟ್ಟಾಗಿದೆ. ಸೌಹಾರ್ದತೆಯ ಉತ್ಸಾಹದಲ್ಲಿ ಪರಸ್ಪರ ಭೇಟಿಯಾಗಲು ಹಲವು ಪಕ್ಷಗಳು ಅತ್ಯಂತ ಉತ್ಸುಕತೆಯಿಂದ ಎದುರು ನೋಡುತ್ತಿವೆ ಎಂದು ಬರೆದುಕೊಂಡಿದ್ದಾರೆ.ಇದೇ ವೇಳೆ, ಕೆಲವು ಪ್ರಮುಖ ಪಕ್ಷಗಳು ತಮ್ಮದೇ ಆದ ವೈಯಕ್ತಿಕ ಕಾರಣಗಳಿಂದಾಗಿ ಈ ಸಭೆಯಿಂದ ದೂರ ಉಳಿಯುತ್ತಿವೆ ಎಂದು ಜೈರಾಮ್ ರಮೇಶ್ ಸ್ಪಷ್ಟಪಡಿಸಿದ್ದಾರೆ. ಸಭೆಗೆ ಬಾರದ ಪಕ್ಷಗಳೂ ಸಹ, ಲಕ್ಷಾಂತರ ಭಾರತೀಯರ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿರುವ, ಪ್ರತಿದಿನ ಸಂವಿಧಾನದ ಮೇಲೆ ದಾಳಿ ನಡೆಸುತ್ತಿರುವ ಹಾಗೂ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ವಿರೋಧ ಪಕ್ಷದ ನಾಯಕರನ್ನು ಹತ್ತಿಕ್ಕುತ್ತಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ಹೊಂದಿವೆ ಎಂದು ಅವರು ಹೇಳಿದ್ದಾರೆ. ನಿರಂತರ ಬೆಲೆ ಏರಿಕೆಯ ಮೂಲಕ ಕೋಟ್ಯಂತರ ಭಾರತೀಯರ ಜೀವನೋಪಾಯಕ್ಕೆ ಹಾನಿ ಮಾಡುತ್ತಿರುವ ಕೇಂದ್ರದ ನೀತಿಗಳ ವಿರುದ್ಧ ಇಡೀ ಒಕ್ಕೂಟ ಒಂದೇ ಧ್ವನಿಯಲ್ಲಿ ಹೋರಾಡಲಿದ್ದು, ಇಂಡಿಯಾ ಜನಬಂಧನ್ ಒಗ್ಗಟ್ಟಾಗಿ ಮುಂದುವರಿಯಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.ಆದರೆ, ಈ ಮಹತ್ವದ ಸಭೆಯ ನಡುವೆಯೂ ಒಕ್ಕೂಟದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಬಹಿರಂಗವಾಗಿವೆ. ಪ್ರಮುಖ ಪಕ್ಷಗಳಾದ ಆಮ್ ಆದ್ಮಿ ಪಾರ್ಟಿ (AAP) ಈಗಾಗಲೇ ಇಂಡಿಯಾ ಒಕ್ಕೂಟದಿಂದ ಬಹಿರಂಗವಾಗಿಯೇ ದೂರ ಇರುವುದಾಗಿ ಘೋಷಿಸಿದ್ದರೆ, ಇತ್ತ ದಕ್ಷಿಣದ ಪ್ರಬಲ ಶಕ್ತಿ ಡಿಎಂಕೆ (DMK) ಈ ಸಭೆಯನ್ನು ಬಹಿಷ್ಕರಿಸುವುದಾಗಿ ತಿಳಿಸಿದೆ. ಇಂತಹ ಕೆಲವು ಆಂತರಿಕ ಹಿನ್ನಡೆಗಳ ನಡುವೆಯೂ, ಒಕ್ಕೂಟದ ಉಳಿದ ನಾಯಕರು ಒಟ್ಟಾಗಿ ಕುಳಿತು ಕೇಂದ್ರದ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಹಮ್ಮಿಕೊಳ್ಳಬೇಕಾದ ಮುಂದಿನ ಚಳವಳಿಗಳು ಮತ್ತು ರಾಜಕೀಯ ತಂತ್ರಗಾರಿಕೆಯ ಕುರಿತು ನಾಳೆಯ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಿದ್ದಾರೆ.

# ಭರತನಾಟ್ಯ ಮಕ್ಕಳಿಗೆ ಪಠ್ಯವಾಗಲಿ–ಸಾಹೇಬಗೌಡ

◆ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಶಿಕ್ಷಣ ಎಂದರೆ ಓದು,ಬರಹ, ಲೆಕ್ಕವನ್ನು ಮೀರಿದ ಕಲಾಶಕ್ತಿಯನ್ನು ಹೊಂದಿದೆ.ಕಾರಣ ಮಕ್ಕಳ ಮನೋಚಾಲನಾ ಶಕ್ತಿ ವೃದ್ಧಿಸುವ ಭರತನಾಟ್ಯ ಪಠ್ಯವಾಗಲಿ ಎಂದು ಚಿಂತಕ ಸಾಹಿತಿ ಶಿಕ್ಷಕ ಸಾಹೇಬಗೌಡ ಬಿರಾದಾರ ಮಾತನಾಡಿದರು.ಪಟ್ಟಣದ ನಿಮಿಷಾಂಭ ದೇವಾಲಯದಲ್ಲಿ ಶ್ರೀ ವಿಶ್ವಜ್ಯೋತಿ ನವೋದಯ ತರಬೇತಿ ಕೇಂದ್ರ ಹಾಗೂ ಎಸ್.ಕೆ.ಭರತನಾಟ್ಯ ಕೇಂದ್ರ ಸಹಯೊಗದಲ್ಲಿ ಹಮ್ಮಿಕೊಂಡ ಎರಡು ತಿಂಗಳ ಬೇಸಿಗೆ ಶಿಬಿರದ ಮುಕ್ತಾಯ ಹಾಗೂ ಜೂನದಿಂದ ಹೊಸ ತರಗತಿಯ ಆರಂಭದ " ಗೆಜ್ಜೆಪೂಜೆ ಹಾಗೂ ವಿತರಣೆ" ಕಾರ್ಯಕ್ರಮವನ್ನು ರವಿವಾರ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಾಹೇಬಗೌಡ ಬಿರಾದಾರ ಮಾತನಾಡಿದರು.ಮಕ್ಕಳಿಗೆ ಅಂಕಗಳ ಗಳಿಕೆಗೂ ಪೂರಕವಾಗಬಲ್ಲ,ಏಕಾಗ್ರತೆಯನ್ನು ಹಾಗೂ ಕ್ರಿಯಾಶೀಲತೆಯನ್ನು ಹೆಚ್ಚಿಸಬಲ್ಲ ಸಂಗೀತ ಹಾಗೂ ಭರತನಾಟ್ಯ ತರಬೇತಿಯನ್ನು ವರ್ಷಪೂರ್ತಿ ಉಚಿತವಾಗಿ







ನೀಡುತ್ತೇವೆ ಎಂದು ಶ್ರೀ ವಿಶ್ವಜ್ಯೋತಿ ತರಬೇತಿ ಕೇಂದ್ರದ ಸಂಚಾಲಕಿ ಶ್ರೀಮತಿ ಭುವನೇಶ್ವರಿ ಎಸ್ ಬಿರಾದಾರ ಮಾತನಾಡಿದರು.ಗೆಜ್ಜೆಪೂಜೆ ಕಾರ್ಯಕ್ರಮದಲ್ಲಿ ಶಿಕ್ಷಕರಾದ ಸಿದ್ದು ಪಟಶೆಟ್ಟಿ,ಯಮನಪ್ಪ ಬಿರಾದಾರ,ಚಿದಾನಂದ ಢವಳಗಿ ಹಾಗೂ ನಲ್ವತ್ತಕ್ಕು ಹೆಚ್ಚು ಭರತನಾಟ್ಯ ಕಲಾವಿದೆ ವಿದ್ಯಾರ್ಥಿನಿಯರು ,ಪೋಷಕರು ಭಾಗವಹಿಸಿದ್ದರು.ಇದೆ ಸಂದರ್ಭದಲ್ಲಿ ಬಿರಾದಾರ ದಂಪತಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಭರತನಾಟ್ಯ ತರಬೇತಿದಾರರಾದ ಮನಿಷಾ ಮಿರಜಕರ ಸಹೋದರಿಯರು ನಿರೂಪಿಸಿ ,ವಂದಿಸಿದರು.

## ಜನರ ಮೇಲೆ ಮೋದಿ ಸರ್ಕಾರಕ್ಕೆ ಕಾಳಜಿ ಇಲ್ಲ : ಸಚಿವ ಯತೀಂದ್ರ ಸಿದ್ದರಾಮಯ್ಯ

◆ ನೈಜ್ಯ ದೆಸೆ ನ್ಯೂಸ್



ವಿಜಯಪುರ: ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಜನರ ಮೇಲೆ ಯಾವುದೇ ಕಾಳಜಿ ಇಲ್ಲ, ಜನ ಹಾಳಾಗಿ ಹೋಗಲಿ ಅಂತಾ ಈಗ ಮತ್ತೆ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ ಜಾಸ್ತಿ ಮಾಡಿದೆ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಕಿಡಿಕಾರಿದರು.ನಗರದಲ್ಲಿ ರವಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಜೆಪಿಯವರು ಯಾವಾಗಲೂ ಜನವಿರೋಧಿ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ.ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದಾಗಲೂ ಕೂಡ ಜನರಿಗೆ ಲಾಭ ಆಗುವ ಕೆಲಸ ಮಾಡಲಿಲ್ಲ. ಆಗಲೂ ಕೂಡಾ ಪೆಟ್ರೋಲ್, ಡೀಸೆಲ್ ಬೆಲೆ ಜಾಸ್ತಿ ಮಾಡಿದ್ದರು. ಈಗ ಮತ್ತೊಮ್ಮೆ ಬೆಲೆ ಜಾಸ್ತಿ ಮಾಡಿರುವುದು ಸರಿಯಲ್ಲ ಎಂದರು.ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಬಾಂಡ್ ಖರೀದಿಸುವ ಮೂಲಕ ಜನರಿಗೆ ಹೊರೆಯಾಗದಂತೆ ನೋಡಿಕೊಳ್ಳಲಾಗಿತ್ತು. ಆದರೆ, ಮೋದಿ ಸರ್ಕಾರ ಕಚ್ಚಾ ತೈಲ ಬೆಲೆ ಕಡಿಮೆ ಇದ್ದಾಗಲೂ ಸಿಲಿಂಡರ್ ದರ ಕಡಿಮೆ ಮಾಡಲಿಲ್ಲ. ಆಗ ಬೆಲೆ ಕಡಿಮೆ ಮಾಡಿದ್ದರೆ, ಜನರಿಗೆ ಹೊರೆ ಆಗುತ್ತಿರಲಿಲ್ಲ. ಈಗ ಬೆಲೆ ಏರಿಕೆಯಿಂದ ಜನರಿಗೆ ಹೊರೆ ಆಗುತ್ತೆ ಮತ್ತು ಇದರಿಂದ ಆರ್ಥಿಕ ವ್ಯವಸ್ಥೆ ಮೇಲೂ ಪರಿಣಾಮ ಬೀರುತ್ತದೆ ಎಂದು ವಾಗ್ದಾಳಿ ನಡೆಸಿದರು. ಕಾಕ್ರೋಚ್ ಜನತಾ ಪಕ್ಷದ ಪ್ರತಿಭಟನೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಪ್ರತಿಭಟನೆ ಮಾಡಲು ಅವಕಾಶ ಹಾಗೂ, ಹಕ್ಕಿದೆ. ಅವರು ಒಳ್ಳೆಯ ಉದ್ದೇಶ ಇಟ್ಟುಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. ಹೀಗಾಗಿ ಅವರು ಪ್ರತಿಭಟನೆ ಮಾಡಲಿ ಎಂದರು.

# ಕಲ್ಯಾಣಚೌಕಿ ಮಠದಲಿ ವಿಶ್ವಪರಿಸರ ದಿನಾಚರಣೆ ಜೀವವೈವಿಧ್ಯ ಮತ್ತು ಸಂಶೋಧನಾ ಕೇಂದ್ರ ಉದ್ಘಾಟನೆ

◆ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ತಾಲ್ಲೂಕಿನ ದೇವಸಮುದ್ರ ಗ್ರಾಮದ ಹೊರವಲಯದಲ್ಲಿರುವ ಶ್ರೀಕಲ್ಯಾಣಚೌಕಿ ಮಠ ಕಾಮಧೇನು ಗೋಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾಮಧೇನು ಗೋಶಾಲೆ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ, ವಿವಿಧ ತಳಿಗಳ ಆಯುರ್ವೇದ ಔಷಧಿಗಳ ಬೀಜಗಳ ಬಿತ್ತನೆ ಕಾರ್ಯಕ್ರಮ ಮತ್ತು ಶ್ರೀಕಲ್ಯಾಣಚೌಕಿ ಮಠ ಜೀವವೈವಿಧ್ಯ ಮತ್ತು ಸಂಶೋಧನಾ ಕೇಂದ್ರ ಉದ್ಘಾಟನೆ ಕಾರ್ಯಕ್ರಮ ಸಡಗರ, ಸಂಭ್ರಮಗಳಿಂದ ಜರುಗಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕೃಷಿ ತಜ್ಞ ಚಿತ್ರದುರ್ಗದ ರವಿತೇಜ ಮಾತನಾಡಿ, ನಾಡಿನಲ್ಲಿ ಗಿಡಮರಗಳ ನಾಶದಿಂದ ಪರಿಸರ ಹಾಳಾಗಿದ್ದು, ಕಾಲಕ್ಕೆ ಸರಿಯಾಗಿ ಮಳೆಯಾಗುತ್ತಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಸ್ವಂತ ಸ್ಥಳಗಳಲ್ಲಿ, ಸರ್ಕಾರದ ಬಯಲು ಜಾಗಗಳಲ್ಲಿ ಸಸಿಗಳನ್ನು ನೆಟ್ಟು ಬೆಳೆಸುವ ಮೂಲಕ ಪರಿಸರ ಉಳಿವಿಗೆ ಪ್ರಯತ್ನಿಸಬೇಕು. ಇದರಿಂದ ಉತ್ತಮ ಪರಿಸರ ನಮ್ಮದಾಗುತ್ತದೆ ಎಂದರಲ್ಲದೆ, ಕೇವಲ ಗಿಡ ಮರಗಳನ್ನು ಬೆಳೆಸುವುದಲ್ಲದೆ, ಉತ್ತಮ ಆಯುರ್ವೇದ ಔಷಧ ಗುಣಗಳನ್ನು ಹೊಂದಿರುವ ಗಿಡಮರಗಳನ್ನು ಬೆಳೆಸುವಲ್ಲಿ ಮುಂದಾಗಬೇಕು ಎಂದರು.



ಸಾವಯವ ಕೃಷಿ ತಜ್ಞರಾದ ಬಸಲಿಂಗಯ್ಯಸ್ವಾಮಿ, ಶಿವಕುಮಾರ ಅವರು ರಸಾಯನಿಕ ಗೊಬ್ಬರ ಬಳಸಿ ಬೆಳೆಗಳನ್ನು ಬೆಳೆಯುವುದರಿಂದಾಗಿ ನಾವು ಬಳಸುವ ಆಹಾರ ಪದಾರ್ಥಗಳು ವಿಷಯುಕ್ತವಾಗಿರುವುದರ ಜೊತೆಗೆ ಫಲವತ್ತಾದ ಭೂಮಿಯೂ ಜವಳಾಗಿ ಬೆಳೆಗಳನ್ನು ಬೆಳೆಯದಂತ ಪರಿಸ್ಥಿತಿ ತಲೆದೋರಿದೆ. ಇದರಿಂದಾಗಿ ರೈತರು ರಾಸಾಯನಿವಲ್ಲದ ಸಾವಯವ ಕೃಷಿಯತ್ತ ಗಮನ ಹರಿಸಬೇಕಾಗಿದೆ ಎಂದು ಸಾವಯವ ಕೃಷಿಗೆ ಬೇಕಾದ ವಿವಿಧ ವಸ್ತುಗಳ ತಯಾರಿಕೆ ಬಗ್ಗೆ ವಿವರಿಸಿದರು.ದೇವಸಮುದ್ರ ಪಿಡಿಒ ಕೆ. ಎಚ್.ಶಶಿಕಾಂತ ಮಾತನಾಡಿ, ನಮ್ಮ ಗ್ರಾ.ಪಂ. ವ್ಯಾಪ್ತಿಯಲ್ಲಿ ಗೋಶಾಲೆ ಆರಂಭಿಸಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದ್ದು, ಗೋಶಾಲೆಗೆ ಅಗತ್ಯವಿರುವ ಸಹಕಾರವನ್ನು ಗ್ರಾ.ಪಂ.ನಿಂದ ನೀಡುವುದಾಗಿ ತಿಳಿಸಿದರು. ಕಲ್ಯಾಣ ಚೌಕಿಮಠ ಕಾಮದೇನು ಗೋಶಾಲೆಯ ಸಂಸ್ಥಾಪಕ ಕೆ.ಎಂ.ಬಸವರಾಜ ಶಾಸ್ತ್ರಿಗಳು ಮಾತನಾಡಿ, ಕಂಪ್ಲಿ ತಾಲ್ಲೂಕಿನಲ್ಲಿ ಕೇವಲ ಗೋಶಾಲೆಯನ್ನು ಆರಂಭಿಸಿಲ್ಲ ಇಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸುವ ಜೊತೆಗೆ ಗೋವುಗಳ ಬಗ್ಗೆ, ಗೋವುಗಳ ಉತ್ಪನ್ನದ ಬಗ್ಗೆ ಕಲಿಸುವು ಜೊತೆಗೆ ಶ್ರೀ ಕಲ್ಯಾಣ ಚೌಕಿಮಠ ಜೀವವೈವಿಧ್ಯ ಮತ್ತು ಸಂಶೋಧನಾ ಕೇಂದ್ರವನ್ನು ಆರಂಭಿಸಿದ್ದು, ಇಲ್ಲಿ ಆರಂಭದಲ್ಲಿ ಜೂ.23 ರಿಂದ ಜೂ.25ರವರೆಗೆ ಮೂರು ದಿನಗಳ ಕಾಲ ಸಸ್ಯ ಅಂಧತ್ವ ಅಥವಾ ಸಸ್ಯ ಕರುಡುತನ ಮತ್ತು ರುತುಮಾನ ಆಧಾರಿತ ಸಸ್ಯ ಶಾಸ್ತ್ರ ಎರಡು ವಿಷಯಗಳನ್ನು ಒಳಗೊಂಡ ತರಬೇತಿ ಕಾರ್ಯಾಗಾರ ನಡೆಯಲಿದೆ ಎಂದರು.ನಂತರ ಕಾಮಧೇನು ಗೋಶಾಲೆ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ವಿಶ್ವ ಪರಿಸರ ದಿನಕ್ಕೆ ಚಾಲನೆ ನೀಡಿದರಲ್ಲದೆ ವಿವಿಧ ರೀತಿಯ ಔಷಧೀತ ಗುಣಗಳಿರುವ ಬೀಜಗಳನ್ನು ಬಿತ್ತಿದರು. ಕಾರ್ಯಕ್ರಮದಲ್ಲಿ ಸಾಂಗತ್ರಯ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯ ಘಣಮಠದಯ್ಯ ಶಾಸ್ತ್ರಿ, ಗಂಗಾವತಿಯ ಉದ್ಯಮಿಗಳಾದ ಉಗಮ್ ಚಂದ್ ಷೇಠ್, ಡಾ.ಜಗನ್ನಾಥ್ ಹಿರೇಮಠ, ಸಿಂಗನಾಳ್ ಕುಮಾರಪ್ಪ, ಹೊಸಕೋಟೆ ಜಗದೀಶ್, ಜಿ.ಅಮರೇಗೌಡ, ಅರವಿ ಅಮರೇಶಗೌಡ, ಎಲಿಗಾರ ವೆಂಕಟರೆಡ್ಡಿ ಹಾಗೂ ಶ್ರೀಮಠದ ಸದ್ಭಕ್ತರು ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

ಕಲೆ
ಬಣ್ಣಗಳ ಮಾತು ಕೇಳಿದಾಗ
ಮನಸೇ ಚಿತ್ರವಾಗುತ್ತದೆ,
ಭಾವನೆಗಳ ತುಂತುರು ಬೀಳುವಾಗ
ಕಲೆ ಜೀವಂತವಾಗುತ್ತದೆ.

ಕಾಗದದ ಮೇಲೆ ರೇಖೆ ಬರೆದರೆ
ಕೇವಲ ಗೆರೆ ಅಲ್ಲ ಅದು,
ಹೃದಯದೊಳಗಿನ ಕನಸುಗಳು
ರೂಪ ಪಡೆದ ಕಥೆ ಅದು.

ನೃತ್ಯದ ಹೆಜ್ಜೆಯಲ್ಲಿ ನಾದವಿದೆ,
ಸಂಗೀತದಲ್ಲಿ ಆತ್ಮದ ಸ್ಪರ್ಶ,
ಕಲೆಯಿಲ್ಲದ ಜೀವನವೆಂದರೆ
ಬಣ್ಣವಿಲ್ಲದ ನಿಶ್ಶಬ್ದ ದರ್ಶನ.

ಕಲೆ ಎಂದರೆ ಆತ್ಮದ ಭಾಷೆ,
ಮಾತಿಲ್ಲದೆ ಹೇಳುವ ಕಥೆ,
ಮಾನವನ ಹೃದಯದೊಳಗಿರುವ
ಅಮರ ಸೌಂದರ್ಯದ ಪಥವೇ ಕಲೆ.

– ರಮೇಶ್

## ಜೂನ್ 15ರವರೆಗೆ ವಿದ್ಯುತ್ ಬಾಕಿ

### ವಸೂಲಾತಿ ವಿಶೇಷ ಅಭಿಯಾನ

### ಬಾಕಿ ಪಾವತಿಸಿ,ವಿದ್ಯುತ್ ಸೇವೆಗೆ ಸಹಕರಿಸಿ

◆ ನೈಜ್ಯ ದೆಸೆ ನ್ಯೂಸ್



ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಕಾರ್ಯ ಮತ್ತು ಪಾಲನಾ ಉಪ-ವಿಭಾಗ, ಗುಲ್ಬರ್ಗ ವಿದ್ಯುತ್ ಪ್ರಸರಣ ಕಂಪನಿ, ಮಸ್ಕಿ ಬಳಗಾನೂರು ಶಾಖೆ ವತಿಯಿಂದ ವಿದ್ಯುತ್ ಬಾಕಿ ವಸೂಲಾತಿ ವಿಶೇಷ ಅಭಿಯಾನ 2026ರ ಜೂನ್ 5ರಿಂದ ಜೂನ್ 15ರವರೆಗೆ ನಡೆಯಲಿದೆ.ಈ ವಿಶೇಷ ಅಭಿಯಾನದ ಅಂಗವಾಗಿ ಮಸ್ಕಿ ಹಾಗೂ ಬಳಗಾನೂರು ವ್ಯಾಪ್ತಿಯಲ್ಲಿ ಅಭಿಯಂತರರು, ವಿದ್ಯುತ್ ಬಿಲ್ ಸಂಗ್ರಾಹಕರು, ಮಾರ್ಗದಾಳುಗಳು ಹಾಗೂ ಸಿಬ್ಬಂದಿವರ್ಗದವರು ವಾಹನಗಳಿಗೆ ಬ್ಯಾನರ್ ಹಾಗೂ ಧ್ವನಿವರ್ಧಕಗಳನ್ನು ಅಳವಡಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.ಗ್ರಾಹಕ ಬಂಧುಗಳು ತಮ್ಮ ಬಾಕಿ ಇರುವ ವಿದ್ಯುತ್ ಬಿಲ್ಲುಗಳನ್ನು ತಕ್ಷಣ ಪಾವತಿಸಿ ಸಂಸ್ಥೆಗೆ ಸಹಕರಿಸಬೇಕೆಂದು ಅಧಿಕಾರಿಗಳು ಮನವಿ ಮಾಡಿಕೊಂಡರು. ಬಾಕಿ ಪಾವತಿಸದ ಗ್ರಾಹಕರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

## ಹಿರಿಯ ಶಾಸಕ ನಾಡಗೌಡರಿಗೆ ಸಚಿವ ಸ್ಥಾನ ನೀಡಲು ಆಗ್ರಹ

◆ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಕಾಂಗ್ರೆಸ್ ಪಕ್ಷದ ಜಿಲ್ಲೆಯ ಹಿರಿಯ ಮುತ್ಸದ್ದಿ ರಾಜ-ಕಾರಣಿ ಮುದ್ದೇಬಿಹಾಳ ಮತಕ್ಷೇತ್ರದಲ್ಲಿ 6 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿ.ಎಸ್.ನಾಡಗೌಡ(ಅಪ್ಪಾಜಿ) ಇವರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಯುವ ಮುಖಂಡ ಮುರ್ತುಜಾ(ಮುದ್ದು) ಪಟೇಲ ಆಗ್ರಹಿಸಿದ್ದಾರೆ. ಪತ್ರಿಕೆಯೊಂದಿಗೆ ಮಾತನಾಡಿದ ಅವರು ಉತ್ತರ ಕರ್ನಾಟಕ ಭಾಗದ ಲಿಂಗಾಯತ ರೆಡ್ಡಿ ಸಮುದಾಯದ ಅತ್ಯಂತ ಪ್ರಭಾವಿ ನಾಯಕರಾದ ಅಪ್ಪಾಜಿ ನಾಡಗೌಡರು ಈ ಹಿಂದೆ ಎಸ್ಎಂ ಕೃಷ್ಣ ಅವರ ಸಂಪುಟದಲ್ಲಿ ಕಾರ್ಮಿಕ ಸಚಿವರಾಗಿ ಸೇವೆಯನ್ನು ಸಲ್ಲಿಸಿ ಅಪಾರ ಅನುಭವ ಹೊಂದಿದ ರಾಜಕಾರಣಿ, ಕೇಂದ್ರ ಹಾಗೂ ರಾಜ್ಯದ ಎಲ್ಲ ಹಿರಿಯ ನಾಯಕರೊಂದಿಗೆ ಅನೂನ್ಯವಾದ ಸಂಬಂಧವನ್ನು ಹೊಂದಿದ ಎಲ್ಲರಿಂದಲೂ ಗೌರವಿಸಲ್ಪಡುವ ವ್ಯಕ್ತಿಯಾಗಿದ್ದಾರೆ. 2023ರ ಚುನಾವಣೆ ಹೊಸ್ತಿಲಿನಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯನವರು ಈ ಭಾಗದಲ್ಲಿ ಪ್ರಚಾರಕ್ಕೆ ಬಂದಾಗ ಅಪ್ಪಾಜಿ ನಾಡಗೌಡರನ್ನು ಮುಂದಿನ ಸರ್ಕಾರದಲ್ಲಿ ಸಚಿವರನ್ನಾಗಿ ಮಾಡುತ್ತಿವೆ ಎಂದು ಭರವಸೆ ನೀಡಿದ್ದರು ಆದರೆ ಅದು ಸಾಧ್ಯವಾಗಲಿಲ್ಲ ಆಗಲೂ ಕ್ಷೇತ್ರದ ಜನರಿಗೆ ಭಾರಿ ನಿರಾಶೆಯಾಗಿತ್ತು. ಇದೀಗ ಸಿಎಂ ಡಿಕೆ ಶಿವಕುಮಾರ ಅವರ ಮೊದಲ ಹಂತದ ಸಚಿವ ಸಂಪುಟದಲ್ಲಿಯೂ ಅವರನ್ನು ಆಯ್ಕೆ ಮಾಡಿಲ್ಲ ಇನ್ನೂ ಎರಡನೇ ಹಂತದಲ್ಲಾದರೂ ಅವರನ್ನು ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಇಲ್ಲದೆ ಹೋದಲ್ಲಿ ತಾಲ್ಲೂಕಿನಾದ್ಯಂತ ದೊಡ್ಡ ಮಟ್ಟದ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಇದಕ್ಕೆ ವ-ರಿಷ್ಠರು ಅವಕಾಶ ಕೊಡಬಾರದು ಎಂದು ಅವರು ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ರಾಯಚೂರಿನಲ್ಲಿ ಮುಸ್ಲಿಂ ಸಮಾಜದ ಶಾಂತಿಯುತ ಪ್ರತಿಭಟನೆ: ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರಿಗೆ ಉಪಮುಖ್ಯಮಂತ್ರಿ ಹಾಗೂ ಸಚಿವ ಸ್ಥಾನ ನೀಡಲು ಒತ್ತಾಯ

◆ ನೈಜ್ಯ ದೆಸೆ ನ್ಯೂಸ್

ರಾಯಚೂರು, : ಜೂನ್ 06 ರಾಯಚೂರು ನಗರದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ನಲ್ಲಿ ಮುಸ್ಲಿಂ ಸಮಾಜದ ವತಿಯಿಂದ ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು. ಕರ್ನಾಟಕ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಸಚಿವರಾದ ಅವರಿಗೆ ಸಚಿವ ಸಂಪುಟದಲ್ಲಿ ಮರುಸ್ಥಾನ ನೀಡುವುದರ ಜೊತೆಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವಂತೆ ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ಪ್ರತಿಭಟನಾಕಾರರು ಒತ್ತಾಯಿಸಿದರು.ಮುಸ್ಲಿಂ ಸಮಾಜದ ಮುಖಂಡರು, ಧರ್ಮಗುರುಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು, 2023ರ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯವು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬೆಂಬಲ ನೀಡಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾಗಲು ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಿದರು. ಆದಾಗ್ಯೂ, ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಮುಸ್ಲಿಂ ಸಮುದಾಯಕ್ಕೆ ಸಿಗಬೇಕಾದ ರಾಜಕೀಯ ಪ್ರಾತಿನಿಧ್ಯ ಮತ್ತು




ಸ್ಥಾನಮಾನ ಸಮರ್ಪಕವಾಗಿ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು, ಮುಸ್ಲಿಂ ನಾಯಕರ ವಿರುದ್ಧ ಸಣ್ಣಪುಟ್ಟ ಆರೋಪಗಳು ಬಂದಾಗ ತಕ್ಷಣ ಕ್ರಮ ಕೈಗೊಳ್ಳಲಾಗುತ್ತಿದ್ದು, ಇತರ ಸಮುದಾಯಗಳ ನಾಯಕರ ವಿರುದ್ಧದ ಗಂಭೀರ ಆರೋಪಗಳ ವಿಚಾರದಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ರಾಜ್ಯದ ಪ್ರಭಾವಿ ಮುಸ್ಲಿಂ ನಾಯಕರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರಿಗೆ ಸೂಕ್ತ ಸ್ಥಾನಮಾನ ನೀಡದಿರುವುದು ಸಮುದಾಯದಲ್ಲಿ ನಿರಾಸೆ ಮತ್ತು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಮುಖಂಡರು ತಿಳಿಸಿದರು."ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರನ್ನು ತಕ್ಷಣವೇ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಹಾಗೂ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಅವರು ಸಮಾಜ ಮತ್ತು ರಾಜ್ಯದ ಜನರ ಸೇವೆಯನ್ನು ಮತ್ತಷ್ಟು ಪರಿಣಾಮಕಾ-ರಿಯಾಗಿ ಮುಂದುವರಿಸಲು ಅವಕಾಶ ಕಲ್ಪಿಸಬೇಕು" ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.ಬೇಡಿಕೆಗಳನ್ನು ಸರ್ಕಾರ ಹಾಗೂ ಪಕ್ಷದ ನಾಯಕರು ಗಂಭೀರವಾಗಿ ಪರಿಗಣಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ರಾಜಕೀಯವಾಗಿ ನಷ್ಟ ಅನುಭವಿಸಬೇಕಾಗಬಹುದು ಎಂದು ಪ್ರತಿಭಟನಾಕಾರರು ಎಚ್ಚ-ರಿಕೆ ನೀಡಿದರು.ಪ್ರತಿಭಟನೆಯಲ್ಲಿ ಮುಸ್ಲಿಂ ಸಮಾಜದ ಧರ್ಮಗುರುಗಳು, ಸಮಾಜದ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಅಭಿಮಾನಿಗಳು ಹಾಗೂ ಸಾವಿರಾರು ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.ಈ ಸಂದರ್ಭದಲ್ಲಿ ಫರೀದ್ ಮೌಲನ್, ಇಮ್ರಾನ್ ಬಡೆಸಾಬ್, ನೆಲಹಾಳ್ ಚಾಂದಪಾಶ್, ಹಬೀಬ್ ಗೋನವಾರ ಸೇ-ರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.




# ಖಾಯಂ ಶಿಕ್ಷಕರಿಲ್ಲದೆ ಮಕ್ಕಳ ಅಬ್ಯಾಸ ಕುಂಠಿತ ಸಾದ್ಯ

◆ ನೈಜ್ಯ ದೆಸೆ ನ್ಯೂಸ್

ಕವಿತಾಳ : ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲಾ ವಿಭಾಗದಲ್ಲಿ ಎಂಟನೆ ತರಗತಿಯಿಂ ಹತ್ತನೇ ತರಗತಿಯುವರೆಗೆ ಒಟ್ಟು 450-500 ಮಕ್ಕಳು ಅಬ್ಯಾಸ ಮಾಡುತ್ತಿದ್ದು ಇಲ್ಲಿ ಯಾವುದೇ ವಿಷಯುಕ್ಕೂ ಖಾಯಂ ಶಿಕ್ಷಕರು ಇಲ್ಲ ಮತ್ತು ಮುಖ್ಯ ಗುರುಗಳು ಇಲ್ಲ, ಕೇವಲ ಇಬ್ಬರು ಚಿತ್ರಕಲಾ ಶಿಕ್ಷಕರು ಮಾತ್ರ ಇದ್ದು ಉಳಿದೆಲ್ಲ ಶಿಕ್ಷಕರು ಅಥಿ-ತಿಶಿಕ್ಷಕರಿದ್ದು ಇದರಿಂದ ಮಕ್ಕಳ ಅಬ್ಯಾಸ ಕುಂಠಿತವಾಗುವ ಸಾದ್ಯತೆ ಇದೆ ಆದ್ದ-ರಿಂದ ಖಾಯಂ ಶಿಕ್ಷಕರ ನೇಮಕಾತಿಗೆ ಆದ್ಯತೆ ನೀಡಬೇಕು ಎಂದು ಪಾಲಕ-ಪೋಷಕರು ಒತ್ತಾಯಿಸಿದ್ದಾರೆ.ಶಾಲೆ ಒಟ್ಟು 21 ಶಿಕ್ಷಕರಮಂಜೂರಾತಿ ಇದ್ದು ಇದರಲ್ಲಿ ಖಾಯಂ ಶಿಕ್ಷಕರು ಕೇವಲ ಇಬ್ಬರು ಮಾತ್ರ ಇತ್ತಿಚೇಗೆ ವರ್ಗಾವಣೆಯಾಗಿ ಬಂದಿದ್ದಾರೆ ಅಧು ಚಿತ್ರಕಲೆ ಶಿಕ್ಷಕರು





,ಯಾವುದೇ ವಿಷಯುಕ್ಕೂ ಖಾಯಂ ಶಿಕ್ಷಕರು ಇಲ್ಲದ ಕಾರಣ ಐವರು ಅಥಿತಿ ಶಿಕ್ಷಕರು ಮಾತ್ರ ವಿಷಯುವಾರು ಪಾಠ ಮಾಡುತ್ತಿದ್ದು ಇದರಿಂದಾಗಿ ಶಿಕ್ಷಣ ಮಟ್ಟ ಸಂಪೂರ್ಣ ಕುಂಠಿತಗೊಳ್ಳುವ ಸಾದ್ಯತೆ ಇದ್ದು ಮಕ್ಕಳು ಉತ್ತಮ ಶಿಕ್ಷಣದಿಂದ ವಂಚಿತರಾಗುವಂತಾಗಿದೆ ಇಲ್ಲಿ ರೈತರ, ಮದ್ಯಮ ವರ್ಗದ ಕೂಲಿಕಾರ್ಮಿಕರ ಮಕ್ಕಳು ಅಬ್ಯಾಸ ಮಾಡುತ್ತಿದ್ದು ಅವರ ಹಿತದೃಷ್ಠಿಯಿಂದ ಶಿಘ್ರವೇ ಕಾಯಂ ಶಿಕ್ಷಕರನ್ನು ನೇಮಕ ಮಾಡಬೇಕು ಎಂದು ಈರಣ್ಣ ಕೆಳಗೇರಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕರು. ಪಟ್ಟಣ ಪಂಚಾಯುತಿ ಮಾಜಿ ಸದಸ್ಯ ಮೌನೇಶ ಹಿರೇಕುರುಬರು, ತಿಮ್ಮಣ್ಣ ಯಾದವ್ ಸೇರಿದಂತೆ ಪಾಲಕರು ಒತ್ತಾಯಿಸಿದ್ದಾರೆ.

**ಕವಿತಾಳ ಪಟ್ಟಣ ಮಾತ್ರವಲ್ಲದೆ ರಾಜ್ಯದ್ಯಾಂತ ಎಲ್ಲಾ ಶಾಲೆಗಳಲ್ಲಿಯೂ ಖಾಯಂ ಶಿಕ್ಷಕರ ಕೊರತೆ ಇದ್ದು ಶಿಘ್ರವೇ ಖಾಯಂ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳಬೇಕು ಹಾಗೂ ನಮ್ಮ ಕವಿತಾಳ ಪಟ್ಟಣದ ಎಲ್ಲಾ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆಯುನ್ನು ನೀಗಿಸಬೇಕಾಗಿದೆ ಒಂದು ವೇಳೇ ಕ್ರಮಕೈಗೊಳ್ಳದಿದ್ದರೇ ಹೊರಾಟ ಮಾಡಲಾಗುವುದು :- ಈರಣ್ಣ ಕೆಳಗೇರಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕರು ರಾಯಚೂರು.**

**ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಖಾಯಂ ಶಿಕ್ಷಕರು ಅವರ ಆದ್ಯತೆ ಮೇರೆಗೆ ವರ್ಗಾವಣೆಯಾಗಿದ್ದು ಶಿಘ್ರವೇ ಇನ್ನುಳಿದ ಅಥಿತಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು ಮತ್ತು ಪ್ರಭಾರಿ ಮುಖ್ಯ ಗುರುಗಳನ್ನು ನೇಮಕ ಮಾಡಲಾಗುವುದು :-ಚಂದ್ರಶೇಖರ ದೊಡ್ಡಮನಿ ಕ್ಷೇತ್ರ ಶಿಕ್ಷಣಾಧಿಕಾರಿ ಮಾನ್ವಿ - ಸಿರವಾರ**

# ಅಧಿಕ ಮಾಸದ ನಿಮಿತ್ತ ಸಾಧಕರಿಗೆ ಸನ್ಮಾನ ಅಧಿಕಮಾಸದಲ್ಲಿ ಮಾಡಿದ ಪುಣ್ಯ ಕಾರ್ಯಗಳಿಗೆ ಅಧಿಕ ಫಲ: ರಾಮಕೃಷ್ಣ ಆಚಾರ್ಯ ಗೋನ್ವಾರ

◆ ನೈಜ್ಯ ದೆಸೆ ನ್ಯೂಸ್

ಸಿಂಧನೂರು, ಜೂನ್ 7: ಅಧಿಕಮಾಸವು ಪವಿತ್ರ ಪರ್ವಕಾಲವಾಗಿದ್ದು, ಇದನ್ನು ಪುರುಷೋತ್ತಮ ಮಾಸ ಎಂದು ಕರೆಯಲಾಗುತ್ತದೆ. ಈ ಮಾಸದಲ್ಲಿ ಮಾಡಿದ ಪುಣ್ಯ ಕಾರ್ಯಗಳು, ದಾನ-ಧರ್ಮಗಳಿಗೆ ಅಧಿಕ ಫಲ ದೊರೆಯುತ್ತದೆ ಎಂದು ಪಂಡಿತ್ ರಾಮಕೃಷ್ಣ ಆಚಾರ್ಯ ಗೋನ್ವಾರ ಹೇಳಿದರು.ನಗರದ ಬ್ರಾಹ್ಮಣರ ಓಣಿಯ ಶ್ರೀರಾಮ ಮಂದಿರದಲ್ಲಿ ಚನ್ನಳ್ಳಿ ಪರಿವಾರದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ "ಸಾಧಕರಿಗೆ ಸನ್ಮಾನ" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಭಜನಾ ಮಂಡಳಿಗಳು ಅಧಿಕಮಾಸದಲ್ಲಿ ಶ್ರದ್ಧಾ-ಭಕ್ತಿಯಿಂದ ಭಜನೆ ಮಾಡಿದರೆ ಪುರುಷೋತ್ತಮನಾದ ಭಗವಂತನು ಅಧಿಕ ಫಲ ನೀಡುತ್ತಾನೆ. ಎಲ್ಲರೂ ಈ ಮಾಸದಲ್ಲಿ ಬಡವರಿಗೆ ದಾನ-ಧರ್ಮಗಳನ್ನು ಮಾಡುವ ಮೂಲಕ ಪುಣ್ಯ ಸಂಪಾದಿಸಬೇಕು ಎಂದು ಅವರು ತಿಳಿಸಿದರು.ಕಾರ್ಯಕ್ರಮದಲ್ಲಿ ಮುಖಂಡರಾದ ಎಂ.ಕೆ. ಗೌರ್ಕರ್, ವೆಂಕಣ್ಣ



ಆಚಾರ್ಯ ದೋಟಿಹಾಳ, ಪ್ರಹ್ಲಾದ ಗುಡಿ (ವಕೀಲ) ಹಾಗೂ ಭೀಮಸೇನ್ ಆಚ-ಾರ್ ನವಲಿ ಮಾತನಾಡಿದರು. ಬ್ರಾಹ್ಮಣ ಸಮಾಜದ ಅಧ್ಯಕ್ಷ ಗೋವಿಂದರಾವ್ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು.ನಿವೃತ್ತ ಶಿಕ್ಷಕ ಕೃಷ್ಣಾಚಾರ ಬಳಗಾನೂರು, ಮಠಾಧಿಕಾರಿ ನರಸಿಂಹ ಆಚಾರ್ಯ ಪುರೋಹಿತ, ವೆಂಕಟರಾವ್ ಚನ್ನಳ್ಳಿ, ನಾಗೇಂದ್ರಕುಮಾರ್ ಸಾಹುಕಾರ, ನಾಗರಾಜರಾವ್ ಚನ್ನಳ್ಳಿ, ಗೋಪಾಲರಾವ್ ಕುಲಕರ್ಣಿ, ಗುರುರಾಜರಾವ್ ಆಲ್ದಾಳ, ರಾಘವೇಂದ್ರರಾವ್ ಕುಲಕರ್ಣಿ, ಹನುಮಂತ ಆಚಾರ್ ಮಸ್ಕಿ, ಲಕ್ಷ್ಮಣರಾವ್




ಕುಲಕರ್ಣಿ ಸೇರಿದಂತೆ ವಿವಿಧ ಭಜನಾ ಮಂಡಳಿಗಳ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಸಾಧಕರಿಗೆ ಸನ್ಮಾನ: ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಹಾಗೂ ಕಾರ್ಯಕ್ರಮದ ಪ್ರಮುಖ ಸಂಘಟಕರಾದ ರಾಘವೇಂದ್ರರಾವ್ ಚನ್ನಳ್ಳಿ ದಂಪತಿಯನ್ನು ತಾಲೂಕು ಬ್ರಾಹ್ಮಣ ಸಮಾಜದ ವತಿಯಿಂದ ಸನ್ಮಾನಿಸಲಾಯಿತು.ಸಂಜೆ ಕರಣಂ ಸಂತೋಷ್ ತಂಡದವ-ರಿಂದ ದಾಸವಾಣಿ ಸಂಗೀತ ಕಾರ್ಯಕ್ರಮ ನಡೆಯಿತು. ಪ್ರಭಾಕರ ಕುಲಕರ್ಣಿ ಹಾಗೂ ಗೀತಾ ಚನ್ನಳ್ಳಿ ಕಾರ್ಯಕ್ರಮ ನಿರೂಪಿಸಿದರು.

# 'ದೇವರ ಆಟ' ಕಿರುಚಿತ್ರ ಶೀಘ್ರ ಬಿಡುಗಡೆ

◆ ನೈಜ್ಯ ದೆಸೆ ನ್ಯೂಸ್

ಮೈಸೂರು : ಸಾಮಾಜಿಕ ಪ್ರಪಂಚದಲ್ಲಿ ನಡೆಯುವ ತಂದೆ-ಮಗನ ಸಂಬಂಧದ ಬಗ್ಗೆ , ಬಾಂಧವ್ಯವನ್ನು ಹಾಗೂ ಈಗಿನ ಕಾಲಘಟ್ಟಕ್ಕೆ ತಂದೆ-ಮಕ್ಕಳು ಯಾವ ರೀತಿ ಇರಬೇಕೆಂದು 'ದೇವರ ಆಟ' ಕಿರುಚಿತ್ರದ ಮೂಲಕ ಮನಮುಟ್ಟುವ ರೀತಿಯಲ್ಲಿ ಮೈಸೂರು ಸೋಮು ಹೇಳಹೊರಟಿದ್ದಾರೆ. ನಲವತ್ತು ನಿಮಿಷಗಳ ಕಿರುಚಿತ್ರವನ್ನು ಮನೆಮಂದಿಯೆಲ್ಲಾ ವೀಕ್ಷಿಸಬಹುದು. ಚಿತ್ರವನ್ನು ಕೆಲವು ಸ್ಪರ್ಧೆಗಳಿಗೆ ಕಳಿಸಲಾಗುತ್ತಿದೆ. ಹೀಗಾಗಿ ಚಿತ್ರವನ್ನು ಸಾಧ್ಯವಿದ್ದಷ್ಟು ಯಾವುದೇ



ಕೊರತೆಯಾಗದಂತೆ ಎಲ್ಲ ರೀತಿಯಲ್ಲಿ ರಿಚ್ ಬರುವಂತೆ ಮಾಡುತ್ತಿದ್ದೇವೆ. ಚಿತ್ರವನ್ನು ನೋಡಿದ ಪ್ರೇಕ್ಷಕರು ಸಣ್ಣ ಬದಲಾವಣೆಯನ್ನಂತೂ ತಮ್ಮ ಮನೆಗಳಲ್ಲಿ-ಮನಗಳಲ್ಲಿ ತಂದುಕೊಳ್ಳುವರು. ಚಿತ್ರದ ಎಲ್ಲಾ ತಾಂತ್ರಿಕ ಕೆಲಸ ಮುಗಿದಿದ್ದು ಅತಿ ಶೀಘ್ರದಲ್ಲೇ ಬಿಡುಗಡೆ ಮಾಡಲಾಗುತ್ತದೆ . ನಾನು ಛಾಯಾಗ್ರಾಹಕನಾಗಿ ಇನ್ನೂ ಬೆಳೆಯಬೇಕಾಗಿದೆ ಅದಕ್ಕೆ ಚಿತ್ರರಂಗದವರ ಜೊತೆಗೆ ಮಾಧ್ಯಮದವರ ಪ್ರೋತ್ಸಾಹ ಕೂಡ ಬೇಕು ಎಂದು ಸುಮಾರು 25 ಕಿರು ಚಿತ್ರಗಳಿಗೆ ಛಾಯಾಗ್ರಹಣ , ಎಂಟು ಸಿನಿಮಾಗಳಿಗೆ ಛಾಯಾಗ್ರಾಹಕನಾಗಿ ಕೆಲಸ ಮಾಡಿ ಅನುಭವವಿರುವ ನಿರ್ದೇಶಕ ಮೈಸೂರು ಸೋಮು ಹೇಳಿದ್ದಾರೆ.ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಿರುವ ಈ ಚಿತ್ರದಲ್ಲಿ ನಾಯಕ ನಟನಾಗಿ ಕಾರ್ತಿಕ್ ಜಯರಾಜ್ ಅಭಿನಯಿಸಿದ್ದು ಉಳಿದಂತೆ ಮಂಡ್ಯ ಸತ್ಯ , ಆನಂದ ಬಾಬು, ಅಜಯ್ ಆರ್ ಎಸ್ , ಲೋಕೇಶ್ , ಗಿರೀಶ್ ಮಳವಳ್ಳಿ , ವಿಶ್ವ ಮಳವಳ್ಳಿ ಹಾಗೂ ಹಳ್ಳಿಯ ಗ್ರಾಮೀಣ ಕಲಾವಿದರು ಅಭಿನಯಿಸಿದ್ದಾರೆ. ಸಾಹಿತ್ಯ-ಸಂಭಾಷಣೆ ಜೊತೆಗೆ ಛಾಯಗ್ರಹಣ ಸೋಮು ಅವರದಿದ್ದು , ಪತ್ರಿಕಾಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ. ಕಾರ್ತಿಕ್ ಜಯರಾಜ್ ಮತ್ತು ಮೈಸೂರ್ ಸೋಮು ನಿರ್ಮಾಪಕರಾಗಿದ್ದಾರೆ.

-ಡಾ.ಪ್ರಭು.ಗಂಜಿಹಾಳ

## ನೇಮಕಾತಿ ಪ್ರಕಟಣೆ

DHFWS ಬೆಂಗಳೂರು ನೇಮಕಾತಿ 2026: 22 ವೈದ್ಯಕೀಯ ಅಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಬೆಂಗಳೂರು ಜೂನ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ವೈದ್ಯಕೀಯ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ - ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09-ಜೂನ್-2026 ರಂದು ವಾಕ್-ಇನ್-ಇಂಟರ್ವ್ಯೂಗೆ ಹಾಜರಾಗಬಹುದು.ಅಧಿಕೃತ ವೆಬ್‌ಸೈಟ್: bengaluruurban.nic.in

# ಜಾಲಹಳ್ಳಿಯ ಜನತಾ ಕಾಲೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಹಾಗೂ ಸಮವಸ್ತ್ರ, ಪುಸ್ತಕ ವಿತರಣಾ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**





ಜಾಲಹಳ್ಳಿ : ಜೂನ್ 6 ಜನತಾ ಕಾಲೋನಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಾಲಹಳ್ಳಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ ಜಾಲಹಳ್ಳಿ ಪಟ್ಟಣದ ಜನತಾ ಕಾಲೋನಿ ಸರ್ಕಾರಿ ಹಿರಿಯ ಪ್ರಾಥ-ಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು ಪಠ್ಯಪುಸ್ತಕ ವಿತರಣಾ ಕಾರ್ಯಕ್ರಮವು ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಜರುಗಿತು.ಕಾರ್ಯಕ್ರಮಕ್ಕೆ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ (ಏಆಔಅ) ಅಧ್ಯಕ್ಷರಾದ ಖುರ್ಷಿದ್ ಪಟೇಲ್ ಅವರು ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು.ಪರಿಸರ ಸಂರಕ್ಷಣೆಯ ಸಂಕಲ್ಪ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಖುರ್ಷಿದ್ ಪಟೇಲ್ ಅವರು, "ಪರಿಸರ ಸಂರಕ್ಷಣೆ ಕೇವಲ ಒಂದು ದಿನದ ಆಚ-ರಣೆಯಾಗದೆ, ಪ್ರತಿಯೊಬ್ಬರ ಜೀವನದ ಭಾಗವಾಗಬೇಕು. ವಿದ್ಯಾರ್ಥಿಗಳು ತಮ್ಮ ಮನೆ ಹಾಗೂ ಶಾಲಾ ಆವರಣದಲ್ಲಿ ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಪ್ರಕೃತಿ ಉಳಿಸುವ ಕಾರ್ಯದಲ್ಲಿ ಭಾಗಿಯಾಗಬೇಕು" ಎಂದು ಕರೆ ನೀಡಿದರು.ಈ ಸಂದರ್ಭದಲ್ಲಿ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಶಾಲಾ ಆವರಣದಲ್ಲಿ ವಿವಿಧ ಹಣ್ಣು ಮತ್ತು ನೆರಳಿನ ಗಿಡಗಳನ್ನು ನೆಟ್ಟು ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು.ಸಮವಸ್ತ್ರ ಹಾಗೂ ಪಠ್ಯಪುಸ್ತಕ ವಿತರಣೆ ಹೊಸ ಶೈಕ್ಷಣಿಕ ವರ್ಷದ ಅಂಗವಾಗಿ ಸರ್ಕಾರದಿಂದ ಒದಗಿಸಲಾದ ಉಚಿತ ಪಠ್ಯಪುಸ್ತಕಗಳು ಹಾಗೂ ಶಾಲಾ ಸಮವಸ್ತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.ಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯರಾದ ಉಲ್ಫೇತ್ ನಿಸ್ಸಾ ಅವರು ಮಾತನಾಡಿ, "ಶಿಕ್ಷಣ ಇಲಾಖೆಯ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ಉತ್ತಮ ವ್ಯಾಸಂಗ ಮಾಡಬೇಕು. ಶಾಲೆಯ ಅಭಿವೃದ್ಧಿಗೆ ಶಿಕ್ಷಕರು, ಪೋಷಕರು ಹಾಗೂ ಏಆಔಅ ಸದಸ್ಯರ ಸಹಕಾರ ಅತ್ಯಗತ್ಯ" ಎಂದು ತಿಳಿಸಿದರು. ಪ್ರಮುಖರು ಉಪಸ್ಥಿತಿ ಕಾರ್ಯಕ್ರಮದಲ್ಲಿ ಚಂದ್ರಹಾಸ್ ಪೂಜಾರಿ, ಮುದುರಂಗಪ್ಪ ವ್ಯಾಗೇರಿ, ಹುಸೇನಪ್ಪ ತಾವಗ, ರಾಜ್ ಮೊಹಮ್ಮದ್ ಸುರ್ನೋಬತ್, ಗೀತಾಂಜಲಿ, ರೇಣುಕಾ ಪಾಲಕ್, ರಾಧಾ, ಉಷಾಮ್ಮ, ರವಿ, ಲಕ್ಷ್ಮಿ ಗಜಾಳದಿನ್ನಿ, ವಿಜಯಲಕ್ಷ್ಮಿ, ಯಲ್ಲಮ್ಮ, ಅಡೇಮ್ಮ, ಏಆಔಅ ಉಪಾಧ್ಯಕ್ಷರು, ಸದಸ್ಯರು, ಶಾಲೆಯ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತ-ರಿದ್ದರು.ಕಾರ್ಯಕ್ರಮದ ಆರಂಭದಲ್ಲಿ ವಿದ್ಯಾರ್ಥಿನಿಯರು ಪ್ರಾರ್ಥನೆ ಸಲ್ಲಿಸಿದರು. ಶಿಕ್ಷಕರು ಅತಿಥಿಗಳನ್ನು ಸ್ವಾಗತಿಸಿದರು.

## ಸರ್ಕಾರಿ ನಿವೃತ್ತ ನೌಕರರ ಸಂಘದ ಮಾಸಿಕ ಸಭೆ

**ನೈಜ್ಯ ದೆಸೆ ನ್ಯೂಸ್**




ತಾಳಿಕೋಟಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರು ತಾಲೂಕ ಘಟಕ ತಾಳಿಕೋಟಿ ಇದರ ಪದಾಧಿಕಾ-ರಿಗಳ ಮಾಸಿಕ ಸಭೆ ಸ್ಥಳೀಯ ಶ್ರೀ ಕಾಳಿಕಾದೇವಿ ದೇವಸ್ಥಾನದ ಸಭಾಭವನದಲ್ಲಿ ಭಾನುವಾರ ಜರುಗಿತು.ಸಂಘದ ಅಧ್ಯಕ್ಷರಾದ ಸಿ.ಎಂ. ಹಿರೇಮಠ ಇವರ ಘನ ಅಧ್ಯಕ್ಷತೆಯಲ್ಲಿ ಸಭೆ ಪ್ರಾರಂಭಗೊಂಡಿತು. ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಜಿ ಎಸ್ ದೇಸಾಯಿ ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ನಂತರ ಸಂಘದ ಅಧ್ಯಕ್ಷರಾದ ಸಿ.ಎಂ. ಹಿರೇಮಠರವರು ಸಂಘಕ್ಕೆ ಅಗತ್ಯವಾದ ಕೆಲವೊಂದು ಬೇಡಿಕೆಗಳನ್ನು ಸರಕಾರದ ಮುಂದೀಡಬೇಕೆಂದು ಈ ಕೆಳಗಿನ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಿದರು 1). ಸಂಘದ ದಾಖಲೆಗಳನ್ನು ಇತರೆ ಕಾಗದಪತ್ರಗಳನ್ನು ಸುರಕ್ಷಿತವಾಗಿಡಲು ಹಾಗೂ ಮಾಸಿಕ ಸಭೆ ನಡೆಸಲು ಸ್ವಂತ ಕಟ್ಟಡ ನಿವೇಶನಕ್ಕಾಗಿ ಪುರಸಭೆಯ ಮುಖ್ಯಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸುವ ಕುರಿತು ಚರ್ಚಿಸಿದರು 2).60 ರಿಂದ 70 ವಯೋಮಾನದ ನಿವೃತ್ತ ನೌಕರರಿಗೆ ಆರೋಗ್ಯಕ್ಕೆ ಸಂಬಂಧಿಸಿದ ಸಂಧ್ಯಾಕಿರಣ, ಆರೋಗ್ಯ ಸಂಜೀವಿನಿ ಪ್ರಮಾಣ ಪತ್ರವನ್ನು ಸರಕಾರದಿಂದ ಪಡೆದುಕೊಳ್ಳುವುದು 3).70 ರಿಂದ 80 ವಯಸ್ಸಿನ ನಿವೃತ್ತ ನೌಕರನಿಗೆ ಆರೋಗ್ಯ ಭಾಗ್ಯ (ಆಯುಷ್ಮಾನ್ ಭಾರತ) ಇದನ್ನು ನಿವೃತ್ತ ನೌಕರರಿಗೂ ಅವಕಾಶ ಕಲ್ಪಿಸಿ ಕೊಡಬೇಕು 4). ಶವ ಸಂಸ್ಕಾರಕ್ಕಾಗಿ ಸರಕಾರ ಅನುದಾನ ನೀಡಬೇಕು 5). ಸಂಘದ ಬಲವರ್ಧನೆಗಾಗಿ ಸದಸ್ಯರನ್ನು ದಾಖಲೆ ಮಾಡಿಕೊಳ್ಳಲು ಎಲ್ಲರೂ ಕೈಜೋಡಿಸಬೇಕೆಂದು ಸಂಘದ ಸದಸ್ಯರಲ್ಲಿ ಮತ್ತು ಆಡಳಿತ ಮಂಡಳಿಯವರಲ್ಲಿ ಕೋರಿದರು. ಎಂ.ಎಸ್ .ಹುಲ್ಲೂರ್ ಕಾರ್ಯಕ್ರಮ ನಿರ್ವಹಿಸಿದರು. ಸಂಘದ ಉಪಾಧ್ಯಕ್ಷರಾದ ಬಿಜಿ ಚಿತ್ತಾಪುರ ವಂದನಾರ್ಪಣೆ ಮಾಡಿದರು ಅಶೋಕ ಕುಲಕರಣಿ ಶ್ರೀಧರ್ ಐತಾಳ್ ಎಂ.ಬಿ .ಮುರಾಳ ಎಲ್. ಆರ್ ನಮಾಜಕಟ್ಟಿ ಹುಲುಗಪ್ಪ ಕಟ್ಟಿಮನಿ ಸಿ ಎಸ್ ಗೋಗಿ ಐ ಆರ್ ಕಲಬುರ್ಗಿ ಜಿ.ಎಸ್. ಜಂಬಲದಿನ್ನಿ, ಬಾಲಕೃಷ್ಣ ಜಿಂಗಾಡಿ ಇನ್ನಿತರ ಸಂಘದ ಸದಸ್ಯರು, ಸಂಘದ ಪದಾಧಿಕಾ-ರಿಗಳು ಉಪಸ್ಥಿತರಿದ್ದರು ಸಂಘ ,ಚಿ-ರಾಯುವಾಗಲೆಂದು ಜಗನ್ಮಾತೆ ಕಾಳಿಕಾ ದೇವಿ ಯಲ್ಲಿ ಎಲ್ಲರೂ ಪ್ರಾರ್ಥಿಸಿದರು ಸಭೆಯು ಮುಕ್ತಾಯಗೊಂಡಿತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ : ದೇವರಾಜ್

**ನೈಜ್ಯ ದೆಸೆ ನ್ಯೂಸ್**



ರಾಯಚೂರು, : ಜೂನ್ 06 ರಾಯಚೂರು ನಗರದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್‌ನಲ್ಲಿ ಮುಸ್ಲಿಂ ಸಮಾಜದ ವತಿಯಿಂದ ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು. ಕರ್ನಾಟಕ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಸಚಿವರಾದ ಅವರಿಗೆ ಸಚಿವ ಸಂಪುಟದಲ್ಲಿ ಮರುಸ್ಥಾನ ನೀಡುವುದರ ಜೊತೆಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವಂತೆ ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ಪ್ರತಿಭಟನಾಕಾರರು ಒತ್ತಾಯಿಸಿದರು.ಮುಸ್ಲಿಂ ಸಮಾಜದ ಮುಖಂಡರು, ಧರ್ಮಗುರುಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು, 2023ರ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯವು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬೆಂಬಲ ನೀಡಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾಗಲು ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಿದರು. ಆದಾಗ್ಯೂ, ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಮುಸ್ಲಿಂ ಸಮುದಾಯಕ್ಕೆ ಸಿಗಬೇಕಾದ ರಾಜಕೀಯ ಪ್ರಾತಿನಿಧ್ಯ ಮತ್ತು ಸ್ಥಾನಮಾನ ಸಮರ್ಪಕವಾಗಿ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು, ಮುಸ್ಲಿಂ ನಾಯಕರ ವಿರುದ್ಧ ಸಣ್ಣಪುಟ್ಟ ಆರೋಪಗಳು ಬಂದಾಗ ತಕ್ಷಣ ಕ್ರಮ ಕೈಗೊಳ್ಳಲಾಗುತ್ತಿದ್ದು, ಇತರ ಸಮುದಾಯಗಳ ನಾಯಕರ ವಿರುದ್ಧದ ಗಂಭೀರ ಆರೋಪಗಳ ವಿಚಾರದಲ್ಲಿ ಪರಿಗಣಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ರಾಜ-ಕೀಯವಾಗಿ ನಷ್ಟ ಅನುಭವಿಸಬೇಕಾಗಬಹುದು ಎಂದು ಪ್ರತಿಭಟನಾಕಾರರು ಎಚ್ಚ-ರಿಕೆ ನೀಡಿದರು.ಪ್ರತಿಭಟನೆಯಲ್ಲಿ ಮುಸ್ಲಿಂ ಸಮಾಜದ ಧರ್ಮಗುರುಗಳು, ಸಮಾಜದ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಅಭಿಮಾನಿಗಳು ಹಾಗೂ ಸಾವಿರಾರು ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.ಈ ಸಂದರ್ಭದಲ್ಲಿ ಫರೀದ್ ಮೌಲನ್, ಇಮ್ರಾನ್ ಬಡೆಸಾಬ್, ನೆಲಹಾಳ್ ಚಾಂದಪಾಶ್, ಹಬೀಬ್ ಗೋನವಾರ ಸೇ-ರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಅರಕೇರಾದಲ್ಲಿ ಮಂಡಲ ಸಂಘಟನೆ ಬಲವರ್ಧನೆ ಸಭೆ ಯಶಸ್ವಿ

**ನೈಜ್ಯ ದೆಸೆ ನ್ಯೂಸ್**




ಅರಕೇರಾ:ಭಾರತೀಯ ಜನತಾ ಪಕ್ಷದ ಮಂಡಲದ ಸಂಘಟನೆ ಸಭೆಯನ್ನು ಅರಕೇರಾ ಮಂಡಲದ ವತಿಯಿಂದ ಸಂಘಟನಾ ಸಭೆಯನ್ನು ಅರಕೇರಾ ಪಟ್ಟಣದಲ್ಲಿನ ಮಾಜಿ ಸಚಿವರಾದ ಕೆ,ಶಿವನಗೌಡನಾಯಕರವರ ನಿವಾಸದಲ್ಲಿ ಹಮ್ಮಿಕೊಳ್ಳಲಾಗಿತ್ತು.ಸಭೆಯ ನೇತೃತ್ವವನ್ನು ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ಗುರುಜೀ ಹಾಗೂ ಕೆ.ಅನಂತರಾಜನಾಯಕ ಹಿರಿಯ ಮುಖಂಡರು ವಹಿಸಿಕೊಂಡಿದ್ದರು.ಕೆ. ಅನಂತ ರಾಜ ನಾಯಕ ಮಾತನಾಡಿ ಅರಕೇರಾ ಮಂಡಲ ವ್ಯಾಪ್ತಿಯಲ್ಲಿ ಬೂತಮಟ್ಟದಲ್ಲಿ ಸಂಘಟನೆ ಬಲವರ್ಧನೆ,ಜನಸೇವೆ ಮತ್ತು ಪಕ್ಷದ ಸಿದ್ಧಾಂತಗಳನ್ನು ಮನೆ ಮನೆಗೂ ತಲುಪಿಸುವ ಸಂಕಲ್ಪ ದೊಂದಿಗೆ ಮತ್ತಷ್ಟು ಬಲಪಡಿಸಿ ನಮ್ಮ ನೆಚ್ಚಿನ ನಾಯಕರು ಹಾಗೂ ಅಭಿವೃದ್ಧಿ ಹ-ರಿಕಾರರು ಕೆ,ಶಿವನಗೌಡನಾಯಕರವರಿಗೆ ಮುಮದಿನ ಚುನವಣೆಯಲ್ಲಿ ಶಕ್ತಿ ನೀಡಲು ನಮ್ಮ ಮುಖ್ಯ ಉದ್ದೇಶವಾಗಬೇಕಾಗಿದೆಂದರು.ಪ್ರತಿ ಬೂತಮಟ್ಟದಲ್ಲಿಯೂ ಕಾರ್ಯಕರ್ತರು ಸಕ್ರೀಯಗೊಳಿಸಿ ನಮ್ಮ ನಾಯಕರು ಪ್ರತಿಹಳ್ಳಿಗಳಲ್ಲಿ ಮಾಡಿದ ಅಭಿವೃದ್ಧಿ ಮತ್ತು ತಾಲೂಕಿನ ಅಭಿವೃದ್ಧಿ ಕುರಿತು ವಿಚಾರಗಳನ್ನು ಮತ್ತು ಮುಂದೆ ಹಮ್ಮಿಕೊಳ್ಳಲಿರುವ ಕೆಎಸ್ ಎನ್ ಅವರ ಜನಪರ ಕಾರ್ಯಕ್ರಮಗಳನ್ನು ಸಾರ್ವಜನಿಕರಿಗೆ ತಲುಪಿಸುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕಾಗಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಬೇಕಾದ ವಿವಿಧ ಸಾಂಸ್ಥಿಕ ಕಾರ್ಯಕ್ರಮಗಳು ಹಾಗೂ ಸಂಘಟನೆ ಬೆಳವಣಿಗೆಗೆ ಪೂರಕವಾದ ನಿರಂತರ ಚಟುವಟಿಕೆಗಳ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.ಸಂಘಟನಾ ಸಭೆಯ ಅಧ್ಯಕ್ಷತೆಯನ್ನು ಲಕ್ಷ್ಮಣರಾಠೋಡ ಅರಕೇರಾ ಬಿಜೆಪಿ ಮಂಡಲದ ಅಧ್ಯಕ್ಷರು ವಹಿಸಿದ್ದರು ಎಸ್ ಟಿ ಮೋರ್ಚಾ ಜಿಲ್ಲಾ ಅಧ್ಯಕ್ಷರು ಪದಾಧಿಕಾ-ರಿಗಳು,ಶಕ್ತಿಕೇಂದ್ರದ ಪ್ರಮುಖರು,ವಿವಿಧ ಮೋರ್ಚಾಗಳ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಕಾರ್ಯಕರ್ತರು ಭಾಗವಹಿಸಿ ಸಂಘಟನೆ ಸಭೆಯನ್ನು ಯಶಸ್ವಿಗೊಳಿಸಿದರು. ಇದೇ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ಗುರುಜೀಯವರನ್ನು ಆತ್ಮೀಯವಾಗಿ ಸನ್ಮಾನಿಸಿಗೌರವಿಸಲಾಯಿತು. ನಿರೂಪಣೆ ನಾಗರಾಜ ಪ್ರಧಾನಕಾರ್ಯದರ್ಶಿ, ಕೊನೆಯಲ್ಲಿ ವಿರೇಶನಾಯಕ ಮಲ್ಲೇದೇವರಗುಡ್ಡ ಜಿಲ್ಲಾ ಎಸ್ ಟಿ ಮೋರ್ಚಾ ಜಿಲ್ಲಾ ಅಧ್ಯಕ್ಷರು ರಾಯಚೂರುಬಸವರಾಜ ಬಲಕಲ್ಲ, ಪ್ರವೀಣ ಸರ್, ಸಾಹಿಲ ಮುರಾಳ, ಹುಸೇನ ಪಟೇಲ,ರಾಜು ವಿಜಾಪುರ, ಪ್ರಶಾಂತ ಜನಾದ್ರಿ, ಪ್ರಶಾಂತ ಅಂಬಿಗೆರ, ರಾಜು ಅಲ್ಲಾಪುರ, ಬಾಬುಸಾಬ ವಠಾರ, ಎಂ.ಎಂ.ಅತ್ತಾರ, ಶರಣು ಕಸ್ತೂರಿ, ಗೋಪಾಲ ಕಟ್ಟಿಮನಿ, ಸಂಚಾಲಕ ಎಸ್.ಎಸ್.ಗಡೇದ ಇತರರು ಇದ್ದರು.

# ಜೂನ್ 11ರಂದು ಕಂಪ್ಲಿಯಲ್ಲಿ ತಾಲೂಕು ಮಟ್ಟದ ಪ್ರತಿಭಾ ಪುರಸ್ಕಾರ ವೀರಶೈವ ಲಿಂಗಾಯತ ಮಹಾ ವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಜನ್ಮದಿನದ ಪ್ರಯುಕ್ತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

**ನೈಜ್ಯ ದೆಸೆ ನ್ಯೂಸ್**



ಬಳ್ಳಾರಿ / ಕಂಪ್ಲಿ : ವೀರಶೈವ ಲಿಂಗಾಯತ ಮಹಾ ವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಜನ್ಮದಿನದ ಪ್ರಯುಕ್ತ ಜೂ.11ರ ಗುರುವಾರದಂದು ವೀರಶೈವ ಲಿಂಗಾಯತ ಮಹಾ ವೇದಿಕೆಯಿಂದ ಪಟ್ಟಣದ ವೀರಶೈವ ಭವನದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ವೀರಶೈವ ಸಂಘದ ತಾಲೂಕಾಧ್ಯಕ್ಷ ಎಸ್.ಎಂ.ನಾಗರಾಜ ಹೇಳಿದರು. ಅವರು ಶನಿವಾರ ಪಟ್ಟಣದ ಶಾರದಾ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ, ಪ್ರೋತ್ಸಾಹದನ, ನೂತನ ಪದಾಧಿಕಾರಿಗಳ ಆಯ್ಕೆ, ಮುಂದಿನ ಸಂಘಟನಾತ್ಮಕ ಚಿಂತನೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, 2026ನೇ ಸಾಲಿನ ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಶೇ.90[illegible]ಕ್ಕಿಂತ ಹೆಚ್ಚು ಅಂಕ ಪಡೆದ ಕಂಪ್ಲಿ ತಾಲೂಕಿನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ಎಮ್ಮಿಗನೂರು ಹಂಪಿ ಸಾವಿರ ದೇವರು, ಮಹಾಂತರ ಮಠದ ಪರಮ ಪೂಜ್ಯ ಶ್ರೀ ವಾಮದೇವ ಮಹಾಂತ ಶಿವಚಾರ್ಯ ಮಹಾಸ್ವಾಮಿ, ಕಂಪ್ಲಿ ಕಲ್ಯಾಣ ಚೌಕಿಮಠದ ಪರಮ ಪೂಜ್ಯ ಶ್ರೀ ಬಸವರಾಜ ಶಾಸ್ತ್ರಿ, ಮುಸ್ಲಿಂ ಧರ್ಮಗುರು ಶ್ರೀ ಹಜರತ್ ಸೈಯದ್ ಷಾ ಅಬುಲ್ ಹಸನ್ ಖಾದ್ರಿ, ಕಂಪ್ಲಿ ತಾಲೂಕು ಕ್ರಿಶ್ಚಿಯನ್ಸ್ ಪಾಸ್ಟರ್ಸ್ ವೆಲ್ಫೇರ್ ಅಸೋಸಿಯೇಷನ್ ಶ್ರೀ ರೇವಪಾಲ್ ಪಂಪಾಪತಿ ಮತ್ತು ವೀರಶೈವ ಲಿಂಗಾಯತ ಮಹಾ ವೇದಿಕೆಯ ಜಿಲ್ಲಾಧ್ಯಕ್ಷ ಶ್ರೀ ಹೊಸಕೋಟೆ ಜಗದೀಶ ಕಾರ್ಯಕ್ರಮದ ಅಧ್ಯಕ್ಷತೆವಹಿಸಲಿದ್ದಾರೆ. ವೀರಶೈವ ಲಿಂಗಾಯತ ಮಹಾ ವೇದಿಕೆಯ ರಾಜ್ಯಾಧ್ಯಕ್ಷ ಶ್ರೀ ಪ್ರಶಾಂತ್ ಕಲ್ಲೂರು ಅವರು ಮೊದಲ ಬಾರಿಗೆ ಕಂಪ್ಲಿಗೆ ಆಗಮಿಸಿ ಉದ್ಘಾಟಿಸಲಿದ್ದಾರೆ. ಮತ್ತು ರಾಜ್ಯ ಉಪಾಧ್ಯಕ್ಷ ಶ್ರೀ ಬಿ.ವಿ.ಗೌಡ್ರು, ತಾಲೂಕಾಧ್ಯಕ್ಷ ಶ್ರೀ ಬಳೆ ಮಲ್ಲಿಕಾರ್ಜುನ ಇವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ. ಹಾಗೂ ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ನಾರಾ ಸೂರ್ಯನಾರಾಯಣರೆಡ್ಡಿ, ಸಚಿವ ಸಂತೋಷ್ ಲಾಡ್, ಸ್ಥಳೀಯ ಶಾಸಕ ಜೆ.ಎನ್.ಗಣೇಶ ಸೇರಿದಂತೆ ಅನೇಕ ಜನಪ್ರತಿನಿಧಿ, ವೀರಶೈವ ಸಮಾಜದ ಮುಖಂಡರು, ಸರ್ವ ಜನಾಂಗದದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.ನಂತರ ವೀರಶೈವ ಲಿಂಗಾಯತ ಮಹಾ ವೇದಿಕೆಯ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಮಾತನಾಡಿ, ಮೊದಲ ಬಾರಿಗೆ ಕಂಪ್ಲಿಯಲ್ಲಿ ಜೂ.11ರಂದು ತಾಲೂಕು ಮಟ್ಟದ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ. ಮತ್ತು ರಾಜ್ಯಾಧ್ಯಕ್ಷ ಪ್ರಶಾಂತ ಕಲ್ಲೂರು ಆಗಮಿಸಲಿದ್ದಾರೆ. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಹಲವು ಸಮಿತಿ ನೇಮಿಸಿ, ಜವಾಬ್ದಾರಿ ನೀಡಲಾಗುವುದು. ಮೊದಲಿಗೆ ಬೈಕ್ ರ್‍ಯಾಲಿ ಮಾಡಿದ ನಂತರ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಸರ್ವ ಸಮಾಜದವರು ಆಗಮಿಸಿ ಯಶಸ್ವಿಗೊಳಿಸಬೇಕು ಎಂದರು. ನಂತರ ಪ್ರತಿಭಾ ಪುರಸ್ಕಾರದ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಅರವಿ ಬಸನಗೌಡ, ಕೆ.ಎಂ.ಹೇಮಯ್ಯಸ್ವಾಮಿ, ಪಿ.ಮೂಕಯ್ಯಸ್ವಾಮಿ, ಇಟಗಿ ಬಸವರಾಜಗೌಡ, ಜಿ.ಲಿಂಗನಗೌಡ, ಕಲ್ಗುಡಿ ವಿಶ್ವನಾಥ್, ಮೆಟ್ರಿ ಹೊನ್ನಳ್ಳಿ ಶಿವಪುತ್ರಪ್ಪ, ಬಿ.ಮಹೇಶಗೌಡ, ಮಾಲಿಕೊಟ್ರಪ್ಪ, ಬಿ.ವಿ.ಗೌಡ, ಎಸ್.ಚಂದ್ರಶೇಖರಗೌಡ, ಬಳೆ ಮಲ್ಲಿಕಾರ್ಜುನ, ಜಗದೀಶ್, ಮೆಟ್ರಿ ಗಂಗಾಧರಗೌಡ, ಮನೋಜಗೌಡ, ಹಂಪಾರೆಡ್ಡಿ ಸೇರಿದಂತೆ ವೀರಶೈವ ಸಮಾಜದವರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### Ph.D.

ಪಿಎಚ್‌ಡಿ (Ph.D. – ಡಾಕ್ಟರ್ ಆಫ್ ಫಿಲಾಸಫಿ) ಉನ್ನತ ಶಿಕ್ಷಣದ ಅತ್ಯುನ್ನತ ಪದವಿಯಾಗಿದೆ. ಇದು ಸಂಬಂಧಿತ ವಿಷಯದಲ್ಲಿ ಹೊಸ ಆವಿಷ್ಕಾರ ಮತ್ತು ಆಳವಾದ ಸಂಶೋಧನೆಯನ್ನು ಒಳಗೊಂಡಿರುವ 3 ರಿಂದ 6 ವರ್ಷಗಳ ಕೋರ್ಸ್ ಆಗಿದೆ. ಸಾಮಾನ್ಯವಾಗಿ ಸ್ನಾತಕೋತ್ತರ ಪದವಿ (Post Graduation) ಪೂರ್ಣಗೊಳಿಸಿದವರು ಈ ಸಂಶೋಧನಾ ಪದವಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.ಅರ್ಹತೆ (Eligibility)ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ (ಕನಿಷ್ಠ 55% ಅಂಕಗಳೊಂದಿಗೆ) ಅಥವಾ 4 ವರ್ಷದ ಪದವಿ.ಎಸ್‌ಸಿ/ಎಸ್‌ಟಿ/ಒಬಿಸಿ (SC/ST/OBC) ವರ್ಗದ ವಿದ್ಯಾರ್ಥಿಗಳಿಗೆ ಶೇ. 50% ರಷ್ಟು ಕನಿಷ್ಠ ಅಂಕಗಳು ಸಾಕು.ಯುಜಿಸಿ–ನೆಟ್ (UGC-NET), ಕೆ–ಸೆಟ್ (KSET), ಅಥವಾ ಜೆಆರ್‌ಎಫ್ (JRF) ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರವೇಶ ಪ್ರಕ್ರಿಯೆಯಲ್ಲಿ ವಿಶೇಷ ಆದ್ಯತೆ ಇರುತ್ತದೆ.ಪ್ರವೇಶ ಪ್ರಕ್ರಿಯೆ (Admission Process)ಪ್ರವೇಶ ಪರೀಕ್ಷೆ: ಬಹುತೇಕ ವಿಶ್ವವಿದ್ಯಾಲಯಗಳು ಪ್ರವೇಶ ಪರೀಕ್ಷೆ (Entrance Test) ನಡೆಸುತ್ತವೆ.ಸಂದರ್ಶನ (Interview): ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆ ಪಡೆದವರು ಅಥವಾ ನೆಟ್/ಸೆಟ್ ಪಾಸಾದವರು ಸಂದರ್ಶನಕ್ಕೆ ಹಾಜರಾಗಬೇಕು.ಸಂಶೋಧನಾ ಪ್ರಸ್ತಾವನೆ (Research Proposal): ನೀವು ಸಂಶೋಧನೆ ಮಾಡಲು ಇಚ್ಛಿಸುವ ವಿಷಯದ ಕುರಿತು ಪ್ರಸ್ತಾವನೆಯನ್ನು ಮಂಡಿಸಬೇಕು. ಕೋರ್ಸ್ ಅವಧಿ ಮತ್ತು ಹಂತಗಳು (Duration & Process)ಕನಿಷ್ಠ 3 ವರ್ಷಗಳು: ಪೂರ್ಣಾವಧಿ (Regular) ಸಂಶೋಧನೆಗೆ ಕನಿಷ್ಠ 3 ವರ್ಷಗಳು ಬೇಕಾಗುತ್ತದೆ. ಕೋರ್ಸ್‌ವರ್ಕ್ (Coursework): ಕೋರ್ಸ್‌ಗೆ ಸೇರಿದ ಮೊದಲ 6 ತಿಂಗಳು ಸಂಶೋಧನಾ ವಿಧಾನಗಳ (Research Methodology) ತರಗತಿಗಳು ಇರುತ್ತವೆ.ಸಂಶೋಧನೆ ಮತ್ತು ಮಂಡನೆ: ನಿಮ್ಮ ಸಂಶೋಧನೆಯ ಆಧಾರದ ಮೇಲೆ ಮಹಾಪ್ರಬಂಧವನ್ನು (Thesis) ಬರೆದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.ಕನ್ನಡದಲ್ಲಿ ಪಿಎಚ್‌ಡಿ (Ph.D. in Kannada)ನೀವು ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಪಿಎಚ್‌ಡಿ ಮಾಡಲು ಬಯಸಿದರೆ, ರಾಜ್ಯದ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ (ಉದಾಹರಣೆಗೆ: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ) ಅವಕಾಶವಿದೆ. ಕನ್ನಡ ಭಾಷಾಶಾಸ್ತ್ರ, ಸಾಹಿತ್ಯ ವಿಮರ್ಶೆ, ಜಾನಪದ, ಅಥವಾ ಪ್ರಾದೇಶಿಕ ಸಾಹಿತ್ಯ ಅಧ್ಯಯನಗಳಂತಹ ವಿಶೇಷ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು.ಕರ್ನಾಟಕದ ಪ್ರಮುಖ ವಿಶ್ವವಿದ್ಯಾಲಯಗಳ ಪ್ರವೇಶ ಅಧಿಸೂಚನೆಗಳಿಗಾಗಿ ಆಯಾ ವಿವಿ ಅಧಿಕೃತ ವೆಬ್‌ಸೈಟ್‌ಗಳನ್ನು ಪರಿಶೀಲಿಸಬಹುದು. (ಉದಾಹರಣೆಗೆ: ಬೆಂಗಳೂರು ವಿಶ್ವವಿದ್ಯಾಲಯ ಅಥ–'ವಾ ಕೆಎಸ್‌ಒಯು (KSOU) ಮೈಸೂರು).

## ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ : ವರದಿ ಕೇಳಿದ ಸಿಎಂ ಡಿಕೆ ಶಿವಕುಮಾರ್

ನೈಜ್ಯ ದೆಸೆ ನ್ಯೂಸ್





ಬೆಂಗಳೂರು : ಕಳೆದ ಮೂರು ತಿಂಗಳ ಅವಧಿಯಲ್ಲಿ ನಡೆದಿರುವ ಎರಡನೇ ಬೆಲೆ ಏರಿಕೆ ಇದಾಗಿದ್ದು, ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಂಗಾಲಾಗಿದ್ದ ಮಧ್ಯಮ ಮತ್ತು ಬಡ ವರ್ಗದ ಜನರಿಗೆ ಇದು ಮತ್ತೊಂದು ದೊಡ್ಡ ಆಘಾತ ನೀಡಿದೆ. ಇದೀಗ ಈ ಕುರಿತು ಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರತಿಕ್ರಿಯೆ ನೀಡಿದ್ದಾರೆ.ಹೌದು.. ಜಾಗತಿಕ ತೈಲ ಮಾರುಕಟ್ಟೆಯ ನಷ್ಟವನ್ನು ಸರಿದೂಗಿಸಲು ತೈಲ ಕಂಪನಿಗಳು ಈ ನಿರ್ಧಾರ ಕೈಗೊಂಡಿದ್ದು, ಸ್ಥಳೀಯ ತೆರಿಗೆ ಮತ್ತು ಸಾಗಾಣಿಕೆ ವೆಚ್ಚಗಳ ಆಧಾರದ ಮೇಲೆ ಪ್ರತಿ ನಗರದಲ್ಲೂ ಬೆಲೆಯಲ್ಲಿ ವ್ಯತ್ಯಾಸ ಕಂಡುಬಂದಿದೆ. ಇದರ ಪರಿಣಾಮವಾಗಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಗ್ಯಾಸ್ ಸಿಲಿಂಡರ್ ಬೆಲೆ 913 ರೂ.ನಿಂದ 942 ರೂ.ಗೆ ಏರಿಕೆಯಾಗಿದೆ. ಸಿಲಿಕಾನ್ ಸಿಟಿಯಲ್ಲಿ ಈ ಹಿಂದೆ 14.2 ಕೆಜಿ ಸಿಲಿಂಡರ್ ಬೆಲೆ ಸುಮಾರು 918 ರೂಪಾಯಿ ಇತ್ತು. ಈಗ ಜಾರಿಗೆ ಬಂದಿರುವ ಹೊಸ ದರದ ಅನ್ವಯ ಗ್ರಾಹಕರು 947 ರೂಪಾಯಿ ಪಾವತಿಸಬೇಕಾಗಿದೆ.ನರ್ಸ್‌ಗಳ ಸಮವಸ್ತ್ರ 'ಭಾರತೀಕರಣ'ಗೊಳ್ಳಲಿ: ಸಂಸದೆ, ನಟಿ ಕಂಗನಾ ರಣಾವತ್ ಸಂಚಲನ ಹೇಳಿಕೆ! ಮೂರು ತಿಂಗಳಲ್ಲಿ ₹89 ಹೆಚ್ಚಳ: ಕಳೆದ ಮಾರ್ಚ್ 7 ರಂದು ಸಿಲಿಂಡರ್ ಬೆಲೆಯಲ್ಲಿ ಭಾರಿ 60 ರೂಪಾಯಿ ಏರಿಕೆ ಮಾಡಲಾಗಿತ್ತು. ಇದೀಗ ಕೇವಲ ಮೂರೇ ತಿಂಗಳಲ್ಲಿ ಮತ್ತೆ 29 ರೂಪಾಯಿ ಹೆಚ್ಚಳ ಮಾಡಿರುವುದು ಗ್ರಾಹಕರ ಕಿಸೆಗೆ ಕತ್ತರಿ ಹಾಕಿದಂತಾಗಿದೆ.ವರದಿ ಕೇಳಿದ ಸಿಎಂ ಡಿ.ಕೆ. ಶಿವಕುಮಾರ್: ಎಲ್‌ಪಿಜಿ ದರ ಏರಿಕೆ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, "ಗೃಹಬಳಕೆ ಅನಿಲ ದರ ಹೆಚ್ಚಳದ ಬಗ್ಗೆ ನಾನು ಈಗಾಗಲೇ ವರದಿ ಕೇಳಿದ್ದೇನೆ. ಆದರೆ ಇದಕ್ಕಿಂತಲೂ ಹೆಚ್ಚಾಗಿ ಕೈಗಾರಿಕಾ ಅನಿಲ (Industrial Ga) ಮತ್ತು ಕೈಗಾರಿಕಾ ಡೀಸೆಲ್ ದರಗಳು ಆತಂಕಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. ಈ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ನಾಳೆ ಅಧಿಕೃತವಾಗಿ ಮಾತನಾಡುತ್ತೇನೆ ಎಂದು ತಿಳಿಸಿದ್ದಾರೆ.ರಾಜಕೀಯಕ್ಕೆ ರಾಘವ ಲಾರೆನ್ಸ್ ಎಂಟ್ರಿ..! ಮುಂಬರುವ ಚುನಾವಣೆ, ಕ್ಷೇತ್ರದ ಬಗ್ಗೆ ನಟ ಸ್ಪಷ್ಟನೆ ಒಟ್ಟಾರೆಯಾಗಿ ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿರುವುದರಿಂದ ಸಂಕಷ್ಟದಲ್ಲಿರುವ ಗೃಹಿಣಿಯರಿಗೆ ಈ ಸಿಲಿಂಡರ್ ದರ ಏರಿಕೆ ನುಂಗಲಾರದ ತುತ್ತಾಗಿದೆ. ಗ್ಯಾಸ್ ಬೆಲೆ ಇದೇ ರೀತಿ ನಿರಂತರವಾಗಿ ಏರುತ್ತಾ ಹೋದರೆ ಮಾಸಿಕ ಬಜೆಟ್ ನಿರ್ವಹಣೆ ಮಾಡುವುದು ಮುಂದಿನ ದಿನಗಳಲ್ಲಿ ಕಷ್ಟಸಾಧ್ಯವಾಗಲಿದ್ದು, ಸರ್ಕಾರಗಳು ತಕ್ಷಣವೇ ಮಧ್ಯಪ್ರವೇಶಿಸಿ ಸಾರ್ವಜನಿಕರ ನೆರವಿಗೆ ಬರಬೇಕೆಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

# ಸಿಂಧನೂರಿನಲ್ಲಿ "ಕಾಂಗ್ರೆಸ್ ನಡೆ, ನಿಮ್ಮ ಮತ ರಕ್ಷಣೆ ಕಡೆ"

## ತರಬೇತಿ ಶಿಬಿರ ಯಶಸ್ವಿ: ಶಾಸಕ ಹಂಪನಗೌಡ ಬಾದರ್ಲಿ ನೇತೃತ್ವ

ನೈಜ್ಯ ದೆಸೆ ನ್ಯೂಸ್







ಸಿಂಧನೂರು: ನಗರ ಮತ್ತು ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಸಮಿತಿ ಸಿಂಧನೂರು ವತಿಯಿಂದ ಹಮ್ಮಿಕೊಳ್ಳಲಾಗಿದ್ದ "ಕಾಂಗ್ರೆಸ್ ನಡೆ, ನಿಮ್ಮ ಮತ ರಕ್ಷಣೆ ಕಡೆ" ಕಾರ್ಯಕ್ರಮದ ಅಂಗವಾಗಿ ಖಖಖ ಹಾಗೂ :ಐಂ–2 ಬೂತ್ ಮಟ್ಟದ ಏಜೆಂಟರ ತರಬೇತಿ ಶಿಬಿರವು ಇಂದು ಮಾನ್ಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಸಾಹೇಬರ ಸಮ್ಮುಖದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಮತದಾರರ ಹಕ್ಕುಗಳ ಸಂರಕ್ಷಣೆ ಹಾಗೂ ಪಕ್ಷದ ಸಂಘಟನೆಯ ಬಲವರ್ಧನೆಗೆ ಈ ಕಾರ್ಯಕ್ರಮವು ಒಂದು ಮಹತ್ವದ ಹೆಜ್ಜೆಯಾಗಿ ಮೂಡಿಬಂದಿತು. ಕಾರ್ಯಕ್ರಮಕ್ಕೆ ವಿಧಾನ ಪರಿಷತ್ ಸದಸ್ಯರಾದ ವಸಂತ್ ಕುಮಾರ್ ಹಾಗೂ ಬಸವರಾಜ್ ಪಾಟೀಲ್ ಇಟಗಿ ಅಧ್ಯಕ್ಷರು ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಇವರು ಮತ್ತು ರಾಯಚೂರು ಜಿಲ್ಲೆಯ ಕಾಂಗ್ರೆಸ್ ಮುಖಂಡರುಗಳು ಮತ್ತು ಕಾಂಗ್ರೆಸ್ಸಿನ ಕಾರ್ಯಕರ್ತರು ಭಾಗಿಯಾಗಿದ್ದರು.ಕಾರ್ಯಕ್ರಮದಲ್ಲಿ ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಮತವೂ ಅಮೂಲ್ಯವಾದುದು. ನಮ್ಮ ಬೂತ್ ಮಟ್ಟದ ಏಜೆಂಟರು (:ಐಂ–2) ಕೇವಲ ಪಕ್ಷದ ಕಾರ್ಯಕರ್ತರಲ್ಲ, ಅವರು ಮತದಾರರ ಹಕ್ಕುಗಳ ನಿಜವಾದ ರಕ್ಷಕರು. ಪ್ರತಿಯೊಬ್ಬ ಅರ್ಹ ನಾಗರಿಕನಿಗೆ ಮತದಾನದ ಹಕ್ಕು ಸಿಗುವಂತೆ ನೋಡುವುದು ಮತ್ತು ಯಾವುದೇ ಅಕ್ರಮ ನಡೆಯದಂತೆ ಜಾಗೃತಿ ವಹಿಸುವುದು ನಮ್ಮ ಜವಾಬ್ದಾರಿ. ಸಿಂಧನೂರು ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಮತ್ತಷ್ಟು ಗಟ್ಟಿಗೊಳಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಾಗಿದೆ ಎಂದರು ಮತ್ತು ವಿಧಾನ ಪರಿಷತ್ ಶಾಸಕ ಎ. ವಸಂತಕುಮಾರ್ ಮಾತನಾಡಿ ಮುಂಬರುವ ದಿನಗಳಲ್ಲಿ ಬೂತ್ ಮಟ್ಟದ ಸಂಘಟನೆಯೇ ನಮ್ಮ ಶಕ್ತಿಯಾಗಲಿದೆ. ತರಬೇತಿ ಶಿಬಿರದಲ್ಲಿ ಸಿಕ್ಕಿರುವ ಮಾರ್ಗದರ್ಶನವನ್ನು ಸರಿಯಾಗಿ ಬಳಸಿಕೊಂಡು, ಪ್ರತಿ ಮನೆಗೂ ಭೇಟಿ ನೀಡಿ ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳನ್ನು ತಲುಪಿಸಬೇಕು. ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸುವುದೇ ಈ ಅಭಿಯಾನದ ಮುಖ್ಯ ಉದ್ದೇಶ ಎಂದು ಹೇಳಿದರು ಹಾಗೂ ಬಸವರಾಜ ಪಾಟೀಲ ಇಟಗಿ ಅಧ್ಯಕ್ಷರು, ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಮಾತನಾಡಿ ರಾಯಚೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭದ್ರವಾದ ಬುನಾದಿಯಿದೆ. ಈ ತರಬೇತಿ ಶಿಬಿರವು ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬಿದೆ. ವಿರೋಧ ಪಕ್ಷಗಳ ತಂತ್ರಗಳಿಗೆ ಬಲಿಯಾಗದೆ, ನಮ್ಮ ಮತಗಳನ್ನು ಸುರಕ್ಷಿತವಾಗಿ ರಕ್ಷಿಸಿಕೊಳ್ಳಲು ಬೂತ್ ಮಟ್ಟದ ಏಜೆಂಟರು ಸದಾ ಜಾಗೃತರಾಗಿರಬೇಕು. ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಪಕ್ಷವನ್ನು ಗರಿಷ್ಠ ಮಟ್ಟಕ್ಕೆ ಕೊಂಡೊಯ್ಯೋಣ ಎಂದರು. ಈ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಕಾಂಗ್ರೆಸ್ ಮುಖಂಡರುಗಳು, ತಾಲೂಕಿನ ಹಿರಿಯ ನಾಯಕರು, ಕಾರ್ಯಕರ್ತರು ಹಾಗೂ ಸಿಂಧನೂರು ತಾಲೂಕಿನ ಸಾರ್ವಜನಿಕರು ಮತ್ತು ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಯೋಧರ ಸೇವೆಯಿಂದ ದೇಶದಲ್ಲಿ ನೆಮ್ಮದಿ : ಮುಖಂಡ ಪಾಟೀಲ

ನೈಜ್ಯ ದೆಸೆ ನ್ಯೂಸ್





ತಾಳಿಕೋಟಿ: ಇವತ್ತು ದೇಶದ 140 ಕೋಟಿ ಜನರು ಸುರಕ್ಷಿತವಾಗಿದ್ದು ನೆಮ್ಮದಿಯ ಬದುಕನ್ನು ನಡೆಸುತ್ತಿದ್ದಾರೆ ಎಂದರೆ ಅದಕ್ಕೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ನಮ್ಮ ಯೋಧರೇ ಕಾರಣವಾಗಿದ್ದಾರೆ ಎಂದು ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್ ಎಸ್ ಪಾಟೀಲ ಕೂಚಬಾಳ ಹೇಳಿದರು. ಶನಿವಾರ ಪಟ್ಟಣದ ಇದಗಾ ಶಾದಿ ಮಹಲ್ ನಲ್ಲಿ ಹಾದಿಮನಿ ಅಭಿಮಾನಿ ಬಳಗದ ವತಿಯಿಂದ ಭಾರತೀಯ ಸೇನೆಯ ಸಿ ಐ ಎಸ್ ಎಫ್ ನಲ್ಲಿ ಸೇವೆಯನ್ನು ಸಲ್ಲಿಸಿ ತಾಯ್ನಾಡಿಗೆ ಮರಳಿದ ಅಧಿಕಾರಿ ಮೊಹಮ್ಮದ್ ಯೂಸಫ ಅಬ್ದುಲಸಾಬ ಹಾದಿಮನಿ ಇವರ ಸ್ವಾಗತ ಹಾಗೂ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬಿಎಸ್‌ಎಫ್ ನಿವೃತ್ತ ಅಧಿಕಾರಿ ಡಾ.ಬಿ.ಎಸ್.ಯಾಳವಾರ ಮಾತನಾಡಿ ಭಾರತೀಯ ಸೇನೆಯಲ್ಲಿ ಹಲವಾರು ಶಾಖೆಗಳಿವೆ ಇವು ದೇಶದ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಿಐಎಸ್‌ಎಫ್ ಕೂಡ ಒಂದು ಪ್ರಮುಖ ಶಾಖೆಯಾಗಿದೆ ಹಾದಿಮನಿ ಇಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ ಅವರ ವಿಶ್ರಾಂತ ಬದುಕು ನೆಮ್ಮದಿಯಿಂದ ಕೂಡಿರಲೆಂದು ಹಾರೈಸುತ್ತೇನೆ ಎಂದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮೊಹಮ್ಮದ್ ಯೂಸೂಫ ಹಾದಿಮನಿ ಅವರು ಬಾಲ್ಯದಿಂದಲೇ ನನಗೆ ಸೇನೆಯಲ್ಲಿ ಸೇರುವ ಆಸೆ ಇತ್ತು ಆ ದೇವರು ನನಗೆ ದೇಶ ಸೇವೆ ಮಾಡುವ ಅವಕಾಶವನ್ನು ಮಾಡಿಕೊಟ್ಟ ಇವತ್ತು ತಾವೆಲ್ಲರೂ ಸೇರಿ ನನ್ನನ್ನು ಗೌರವಿಸಿದ್ದೀರಿ ನಾನು ನಿಮ್ಮೆಲ್ಲರಿಗೆ ಚಿರಋಣಿಯಾಗಿದ್ದೇನೆ ಎಂದರು. ಸಮಾರಂಭದ ಸಾನಿಧ್ಯ ವಹಿಸಿ ಮುಸ್ಲಿಂ ಧಾರ್ಮಿಕ ಮುಖಂಡ ಸಯ್ಯದ್ ಶಕೀಲ ಅಹ್ಮದ್ ಖಾಜಿ ಮಾತನಾಡಿ ನಾವೆಲ್ಲರೂ ದೇಶಪ್ರೇಮನ್ನು ಬೆಳಸಿಕೊಂಡು ದೇಶದ ರಕ್ಷಣೆ ವಿಷಯ ಬಂದಾಗ ಒಂದಾಗಿ ಕೆಲಸ ಮಾಡಬೇಕಾಗಿದೆ 38 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿದ ಹಾದಿಮನಿ ಅವರಿಗೆ ಅಭಿನಂದಿಸುತ್ತೇನೆ ಎಂದರು. ತಾಳಿಕೋಟಿ ತಾಲೂಕ ಸಿ ಎ ಪಿ ಎಫ್ ಅಧ್ಯಕ್ಷ ರಾಮನಗೌಡ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.ಇದೇ ಸಂದರ್ಭದಲ್ಲಿ ಸೇವಾ ನಿವೃತ್ತ ಸಿಐಎಸ್‌ಎಫ್ ಅಧಿಕಾರಿ ಹಾದಿಮನಿ ಹಾಗೂ ಅವರ ಕುಟುಂಬಕ್ಕೆ ವಿವಿಧ ಸಂಘ–ಸಂಸ್ಥೆಗಳ ಮುಖ್ಯಸ್ಥರು ರಾಜಕೀಯ ಧು–ರೀಣರು, ಸೇನಾ ಸಂಘಗಳ ಪದಾಧಿಕಾರಿಗಳು, ಕುಟುಂಬದ ಸದಸ್ಯರು ಹಾಗೂ ಅಭಿಮಾನಿಗಳು ಸನ್ಮಾನಿಸಿ ಗೌರವಿಸಿದರು. ವೇದಿಕೆಯಲ್ಲಿ ಗಣ್ಯರಾದ ಬಸನಗೌಡ ಹಡಲಗೇರಿ ಕೊಣ್ಣೂರ, ಪಿ. ಎಸ್.ಐ. ಎಸ್ ಎಂ ಪಡಶೆಟ್ಟಿ, ಎಂ.ಎ.ಮೇತ್ರಿ,ಖಾಸಿಮಪಟೇಲ ಪಾಟೀಲ,–ಎನ್.ಆರ್.ಮೊಕಾಶಿ,ರೋಶನ ಡೋಣಿ, ಸಾಹೇಬಗೌಡ ಅಸ್ಕಿ, ಮೊಹಮ್ಮದ್ ಯೂನೂಸ್ ಹಾದಿಮನಿ, ಮುಜಾಹಿದ್ ನಮಾಜಕಟ್ಟಿ,ಪಿ. ಕೆ.ಜಾಧವ,ಬಿ.ಬಿ. ಚೋಕಾವಿ,ನಿಂಗನಗೌಡ, ಮೊಹಮ್ಮದ್ ಹನೀಫ್ ಮಾಗಿ, ಮೆಹಬೂಬಸಾಬ ಮುಲ್ಲಾ, ಉಸ್ಮಾನಸಾಬ ಸಿಪಾಯಿ,ರೇಖಾ ಕೊಂಡಗೂಳಿ, ರೆಹ್ಮತಬಿ ಮೊಹಮ್ಮದ್ ಯೂಸೂಫ ಹಾದಿಮನಿ, ಕುಲಸೂಮಬೇಗಂ ಹಾದಿಮನಿ ಮತ್ತಿತರರು ಇದ್ದರು. ಭವ್ಯ ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ದೇವರ ಹುಲಗ್ಬಾಳ ಗ್ರಾಮದಿಂದ ತಾಳಿಕೋಟಿ ಪಟ್ಟಣದವರೆಗೆ ನಿವೃತ್ತ ಸೇನಾಧಿಕಾರಿ ಹಾದಿಮನಿ ಇವರನ್ನು ಬೈಕ್ ರ್ಯಾಲಿ ಮೂಲಕ ಭವ್ಯ ಮೆರವಣಿಗೆಯೊಂದಿಗೆ ತರಲಾಯಿತು.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯತೆ ಆಗಲಿ : ಯಾದಗಿರಿ

ನೈಜ್ಯ ದೆಸೆ ನ್ಯೂಸ್



ತಾಳಿಕೋಟೆ : ಇರುವುದೊಂದೇ ಭೂಮಿಯನ್ನು ನಮಗಾಗಿ ಅಲ್ಲದಿದ್ದರೂ ನಮ್ಮ ಮುಂದಿನ ಪೀಳಿಗೆಗೆ ಉಳಿಸುವುದಕ್ಕಾಗಿ ಈ ಪರಿಸರ ಸಂರಕ್ಷಣೆ ನಮ್ಮ ಮೊದಲ ಆದ್ಯತೆಯಾಗಬೇಕಿದೆ ಎಂದು ಸರ್ಕಾರಿ ಪ್ರೌಢಶಾಲೆ ಆಲೂರ ನ ಮುಖ್ಯಶಿಕ್ಷಕ ವಿದ್ಯಾಧರ ಯಾತಗಿರಿ ಹೇಳಿದರು. ಅವರು ಪಟ್ಟಣದ ಕರ್ನಾಟಕ ಪಬ್ಲಿಕ್ ಸ್ಕೂಲ್ ( ಕನ್ನಡ ಮಾದರಿ ಶಾಲೆ) ಆವರಣದಲ್ಲಿ ಹಸಿರು ಸಂಪದ ಬಳಗ, ಅರಣ ಇಲಾಖೆ ಹಾಗೂ ಪುರಸಭೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವಪರಿಸರ ದಿನಾಚರಣೆ ಸಮಾರಂಭದಲ್ಲಿ ಉಪನ್ಯಾಸಕರಾಗಿ ಆಗಮಿಸಿ ಭಾನುವಾರ ಮಾತನಾಡಿದರು. ನಮ್ಮ ಐಷಾರಾಮಿ ಜೀವನಕ್ಕಾಗಿ ಈ ಭೂಮಿಯನ್ನು ಸಂಪನ್ಮೂಲಗಳನ್ನು ನಾಶ ಮಾಡುತ್ತಿದ್ದೇವೆ.. ಇರುವಷ್ಟನ್ನಾದರೂ ರಕ್ಷಿಸಬೇಕಿದೆ. ನಿಸರ್ಗದ ನಡುವಿನ ಪ್ರತಿ ಜೀವಿಗಳ ನಡುವಿನ ಪರಸ್ಪರ ಸಹಸಂಬಂಧ, ಅವಲಂಭನೆಯಿದೆ. ಅವಲಮಭನೆಯ ಂದು ಕೊಂಡಿ ಕಳಚಿದರೂ ಹಲವು ಜೀವಪ್ರಬೇಧಗಳು ನಾಶವಾಗುತ್ತ ಹೋಗಿ, ಪರಿಸರದ ಅಸಮತೋಲನಕ್ಕೆ ಕಾರಣವಾಗುತ್ತವೆ ಎಂದರು. ಪ್ರಕೃತಿಯಲ್ಲಿ ಪರ್ಯಾಯ ಶಕ್ತಿಮೂಲಗಳ ಬಳಕೆಯಾಗಬೇಕು. ಪರಿಸರ ರಕ್ಷಣೆಯ ಹತ್ತು ಹಲವಾರು ದಿನಗಳಿದ್ದು ಅವುಗಳು ದಿನದರ್ಶಿಕೆಯಲ್ಲಿ ಮುದ್ರಿತವಾಗುವಂತೆ ಮಾಡಿ ಅವುಗಳನ್ನು ಮಕ್ಕಳಿಗೆ ಅದರ ಉದ್ದೇಶವನ್ನು ತಿಳಿಸುವ ಪ್ರಯತ್ನ ಮಾಡಬೇಕಾಗಿದೆ ಎಂದರು. ಅರಣ್ಯ ಇಲಾಖೆಯ ವೃಕ್ಷ ರಕ್ಷಕ ಮಹಾಂತೇಶ ಹಾದಿಮನಿ, ಅರಣ್ಯ ಇಲಾಖೆಯಿಂದ ರೈತರಿಗೆ ಕೃಷಿ ಅರಣ್ಯ ಯೋಜನೆಯಿದ್ದು ಕಡಿಮೆ ದರದಲ್ಲಿ ಸಸಿಗಳು ಲಭ್ಯವಿದ್ದು ಅದರ ಸದುಪಯೋಗ ಪಡಿಸಿಕೊಳ್ಳಿ, ಎಂದರು.ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ಫಿರೋಜ ಮುಲ್ಲಾಮಾತನಾಡಿ, ಪಟ್ಟಣವನ್ನು ಸ್ವಚ್ಛ, ಆರೋಗ್ಯವಂತ ಹಾಗೂ ಮಾದರಿ ಪಟ್ಟಣವನ್ನಾಗಿಸಲು ಪುರಸಭೆಯೊಂದಿಗೆ ಕೈಜೋಡಿಸಿ ಎಂದರು. ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಅಧ್ಯಕ್ಷತೆಯನ್ನು ವಹಿಸಿದ್ದರು. ಹಸಿರು ಸಮಪದ ಬಳಗದ ಅಧ್ಯಕ್ಷ ಡಾ.ವಿ.ಎಸ್.ಕಾರ್ಚಿ ಮಹಿಳಾ ಘಟಕದ ಅಧ್ಯಕ್ಷೆ ಸುಮಂಗಲಾ ಕೋಳೂರ ಮಾತನಾಡಿದರು.ಸಿದ್ದು ಕರಡಿ ನಿರ್ವಹಿಸಿದರು. ಗುಂಡೂರಾವ್ ಧನಪಾಲ ಸ್ವಾಗತಿಸಿದರು. ಅಪ್ಪಾಸಾಹೇಬಗೌಡ ಮೂಲಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಶಿನಾಥ ಸಜ್ಜನ ವಂದಿಸಿದರು. ಸಭಾ ಕಾರ್ಯಕ್ರಮದ ನಂತರ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಬಳಗದ ಪದಾಧಿಕಾರಿಗಳಾದ ಆರ್.ಎಸ್.ಪಾಟೀಲ ಕೂಚಬಾಳ, ಕಾಶಿನಾಥ ಮುರಾಳ, ಪ್ರಭುಗೌಡ ಮದರಕಲ್ಲ, ಅಲ್ಲಾಭಕ್ಷ ನಮಾಜಕಟ್ಟಿ, ಡಾ.ಆನಂದ ಭಟ್ಟ, ಡಾ.ಶ್ರೀಶೈಲ ಹುಕ್ಕೇರಿ, ಡಾ. ನಜೀರ ಕೊಳ್ಯಾಳ,ರಾಜು ಸೊಂಡೂರ, ಡಾ.ಗುರು ಚಿತ್ತರಗಿ, ಸಿ.ಎಂ.ಹಿರೇಮಠ, ಅನಿತಾ ಸಜ್ಜನ, ದ್ಯಾಮನಗೌಡ ಪಾಟೀಲ, ಸಂಗನಗೌಡ ಅಸ್ಕಿ, ರುದ್ರಮ್ಮ ದೇಸಾಯಿ,ದಿನಕರ ಜೋಶಿ, ಶಫೀಕ ಇನಾಮದಾರ, ಪ್ರಕಾಶ ಸುರಪುರ, ಟಿ.ಸಿ.ಸಜ್ಜನ, ಬಸವರಾಜ ಬಲಕಲ್ಲ, ಪ್ರವೀಣ ಸರ್, ಸಾಹಿಲ ಮುರಾಳ, ಹುಸೇನ ಪಟೇಲ,ರಾಜು ವಿಜಾಪುರ, ಪ್ರಶಾಂತ ಜನಾದ್ರಿ, ಪ್ರಶಾಂತ ಅಂಬಿಗೆರ, ರಾಜು ಅಲ್ಲಾಪುರ, ಬಾಬುಸಾಬ ವಠಾರ, ಎಂ.ಎಂ. ಅತ್ತಾರ, ಶರಣು ಕಸ್ತೂರಿ, ಗೋಪಾಲ ಕಟ್ಟಿಮನಿ, ಸಂಚಾಲಕ ಎಸ್.ಎಸ್.ಗಡೇದ ಇತರರು ಇದ್ದರು.

